

## ನಮ್ಮ ಸುವರ್ಣ ಆಶಯ

ಮಹಾಬೋಧಿ ಸೊಸೈಟಿಯು 1956 ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತರವರಿಂದ ಸ್ಥಾಪನೆಗೊಂಡು ಅವರ ಮಾರ್ಗದರ್ಶನದಲ್ಲಿ ಭಗವಾನ್ ಬುದ್ಧರು ಬೋಧಿಸಿದ ನಾಲ್ಕು ಪರಮ ಪವಿತ್ರ ಸತ್ಯಗಳನ್ನು, ಪಂಚಶೀಲಗಳನ್ನು, ಮಧ್ಯಮ ಮಾರ್ಗವನ್ನು, ಆಧ್ಯಾತ್ಮಿಕ ವಿಚಾರಗಳನ್ನು ಬೋಧಿಸುವುದರ ಜೊತೆಗೆ ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸುತ್ತಾ ಬಂದಿದೆ.

2550ನೇ ಪವಿತ್ರ ಬುದ್ಧ ಜಯಂತಿಯು ಹಾಗು ಮಹಾಬೋಧಿ ಸೊಸೈಟಿಯ ಸುವರ್ಣಜಯಂತಿ ಮತ್ತು ಸುವರ್ಣ ಕರ್ನಾಟಕ ಜಯಂತಿಗಳ ನೆನಪಿಗಾಗಿ ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆಯಲ್ಲಿ 50 ಕನ್ನಡ ಪುಸ್ತಕಗಳನ್ನು ಪ್ರಕಟಿಸುವ ಆಶಯವುಳ್ಳವರಾಗಿದ್ದೇವೆ.

ಮನುಕುಲದ ಒಳಿತಿಗಾಗಿ ಭಗವಾನ್ ಬುದ್ಧರು ಉಪದೇಶಿಸಿದ ಸತ್ಯಗಳನ್ನು ಈ ಕಿರು ಕನ್ನಡದ ಪುಸ್ತಕಗಳಲ್ಲಿ ಸರಳ ಆಡುಭಾಷೆಯಲ್ಲಿ ಪ್ರಕಟಿಸಿ ಎಲ್ಲ ವಯೋಮಾನದವರಿಗೂ ಅರ್ಥವಾಗುವ ಪುಸ್ತಕಮಾಲಿಕೆ ಇದಾಗಲಿದೆ.

ಇಂದಿನ ಕಲುಷಿತ ಬದುಕಿನಿಂದ ನೆಮ್ಮದಿ ಕಳೆದುಕೊಂಡ ಮನಸುಗಳಿಗೆ ಸರಿ ತಪ್ಪುಗಳ ಅರಿವು ಮೂಡಿಸಿ ಸುಖ, ಶಾಂತಿ ಮತ್ತು ಜ್ಞಾನದ ದಾರಿದೀಪವಾಗಿ ಈ ಮಾಲಿಕೆ ಜನರ ಮನದಲ್ಲಿ ಸುವರ್ಣ ಬೆಳಕು ಚಲ್ಲಲಿ ಎನ್ನುವುದೇ ನಮ್ಮ ಆಶಯ.

Maha Bodhi Society
14, Kalidasa Road, Gandhinagar, Bangalore - 560 009, India
Tel : 080-22250684, Fax: 080-22264438 Email : info@mahabodhi.info, www.mahabodhi.info

# ಬೌದ್ಧರ ಸೌಹಾರ್ದ ಮನೋಭಾವ

ಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ



ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ 22

ಮಹಾಬೋಧಿ ಸುವರ್ಣ ಪುಸ್ತಕ ಮಾಲಿಕೆ–22

# ಬೌದ್ಧರ ಸೌಹಾರ್ದ ಮನೋಭಾವ

## ಬಹು ಧರ್ಮಗಳ ಸಮಾಜದಲ್ಲಿ ಧಮ್ಮ

## ಮತ್ತು

## ಪರಧರ್ಮಗಳ ಬಗ್ಗೆ ಬೌದ್ಧರ ಸೌಹಾರ್ದ ಮನೋಭಾವ

ಆಂಗ್ಲ ಮೂಲ :

ಪರಮಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ ನಾಯಕ ಥೇರ

**ಕನ್ನಡಕ್ಕೆ : ಅನೀಶ್ ಬೋಧ್**

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
ಗಾಂಧಿನಗರ, ಬೆಂಗಳೂರು–560 009

**Religion in a Multi-Religious Society**
**&**
**Buddhist attitude towards other Religions**
Written by
**Venerable Dr. K. Sri Dhammananda** and
translated into Kannada by **Aneesh Bodh**
Donated by : **Devotees from Malaysia**
**ಮೊದಲ ಕನ್ನಡ ಆವೃತ್ತಿ ಡಿಸೆಂಬರ್ 2008 – 6000 ಪ್ರತಿಗಳು**

ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–22264438
E-mail : info@mahabodhi.info

ಮುಖಪುಟ ವಿನ್ಯಾಸ : .........

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ನಂ. 39, 7ನೇ ಅಡ್ಡರಸ್ತೆ, ಸರಸ್ವತಿಪುರ
ನಂದಿನಿ ಲೇಔಟ್, ಬೆಂಗಳೂರು–96
ದೂ : 23498198, ಮೊ : 9916461691

Sabba dānaṁ Dhamma dānaṁ jināti

This free publication of 6,000 copies in India has been sponsored by:

Sasana Abhiwurdhi Wardhana Society,
Buddhist Maha Vihara Brickfields,
Kuala Lumpur, MALAYSIA

May all beings attain Nibbana!



Sasana Abhiwurdhi Wardhana Society,
Buddhist Maha Vihara Brickfields,
Kuala Lumpur, MALAYSIA

Services at the Vihara:

- Buddhist Translation Exchange in 30 languages
- Free Publications in 14 languages
- Offers Diploma course in Buddhism
- Offers Higher Diploma course in Dhammaduta (for Sangha only)
- Sunday Dhamma School for 1500 students
- Dhamma Talks, Meditation, Buddha Puja, Bhojanga Puja weekly
- Inter-faith dialogue and discussions

www.buddhistmahavihara.com
www.ksridhammananda.com
www.bisds.org

## ಮೊದಲ ಮಾತು

**ಸಬ್ಬದಾನಂ ಧಮ್ಮ ದಾನಂ ಜಿನಾತಿ ।**
**ಸಬ್ಬರಸಂ ಧಮ್ಮ ರಸಂ ಜಿನಾತಿ**



**ಪೂಜ್ಯ ಆಚಾರ್ಯ**
**ಬುದ್ಧರಕ್ಖಿತ ಭಂತೇಜಿ**

ಭಗವಾನ್ ಬುದ್ಧರು ಉಪದೇಶಿಸಿದ ಧಮ್ಮಪದದ ಮಾತು ಇದು. ಎಲ್ಲಾ ದಾನಕ್ಕಿಂತ ಧಮ್ಮ ದಾನವು ಶ್ರೇಷ್ಠ, ಎಲ್ಲಾ ರಸಸ್ವಾದಕ್ಕಿಂತ ಧಮ್ಮ ರಸಸ್ವಾದ ಪರಮಾನಂದದಾಯಕವಾದದ್ದು.

ಹೌದು, ಸತ್ಯವಾಕ್ಯ ಇದು. ನಮ್ಮ ಇಡೀ ಬದುಕನ್ನು ನಾವು ಜೀವಿಸುವುದು ಆನಂದದಿಂದ ಬಾಳುವುದಕ್ಕೆ. ಅದಕ್ಕೆ ಮೂಲ ಬದುಕಿನಲ್ಲಿ ಶೀಲ–ಸನ್ನಡತೆ, ಸದಾಚಾರ ಶೀಲವಿದ್ದರೆ, ಸಮಾಧಾನ ಮತ್ತು ಸಂತೋಷ ತಾನಾಗಿಯೇ ಒದಗಿ ಬರುತ್ತವೆ.

ಕ್ರಿಸ್ತಪೂರ್ವ 3ನೇ ಶತಮಾನದಲ್ಲಿ ಬೌದ್ಧ ಮಹಾಸಾಮ್ರಾಟ ಅಶೋಕ, ನೆಮ್ಮದಿಯನ್ನು ಪಡೆದಿದ್ದು, ಆನಂದವನ್ನು ಹಂಚಿದ್ದು ಈ ಬೌದ್ಧ ಸರಣಗಳನ್ನು, ಶೀಲಗಳನ್ನು ಪಾಲಿಸಿದ ಮೇಲೆಯೇ. ಆತನಂತಹ ಮಹಾದಾನಿ ಬೇರೆ ಯಾರೂ ಇಲ್ಲ. ಬುದ್ಧ ಧಮ್ಮದ ದೀಪವನ್ನು ಬಹುಜನ ಸುಖಾಯ, ಬಹುಜನ ಹಿತಾಯ, ವಿಶ್ವದ ಎಲ್ಲಕಡೆಯೂ ಹಂಚಲಿಕ್ಕಾಗಿ ಆತ ತನ್ನ ಮಕ್ಕಳಾದ ಮಹಿಂದ ಮತ್ತು ಸಂಘಮಿತ್ರರನ್ನು ಸಂಘಕ್ಕೆ ದಾನ ಮಾಡಿದ. ಹಾಗೆಯೇ ಭಾರತದ ಉದ್ದಗಲಕ್ಕೂ 84,000 ಸ್ತೂಪಗಳನ್ನು ಕಟ್ಟಿಸಿದ. ಮಹಿಷ ಮಂಡಲ – ಈ ನಮ್ಮ ಕರ್ನಾಟಕಕ್ಕೂ



ಪೂಜ್ಯ ಯೋನ ರಕ್ಖಿತ ಎನ್ನುವ ಭಿಕ್ಖುವನ್ನು ಕಳುಹಿಸಿದ್ದ. ಭಾರತದಲ್ಲಿ ಬೆಳಗಿದ ಈ ಬುದ್ಧ ಬೆಳಕು, ಇಡೀ ವಿಶ್ವಕ್ಕೆ ಬೆಳಕಾಗಿ ವಿಶ್ವಜ್ಯೋತಿಯಾಯಿತು. ಶಾಂತಿಯ ತಂಪನ್ನೆರೆಯಿತು.

ಅದೇ ಕೆಲಸವನ್ನು ಮುಂದುವರೆಸಿ 1956ರಲ್ಲಿ ಪೂಜ್ಯ ಆಚಾರ್ಯ ಬುದ್ಧರಕ್ಖಿತ ಭಂತೇಜಿಯವರು ಬೆಂಗಳೂರಿನಲ್ಲಿ ಮಹಾಬೋಧಿ ಸಂಸ್ಥೆ ಕಟ್ಟಿದರು. ಬುದ್ಧಜ್ಞಾನ ದೀಪವನ್ನು ಹಿಡಿದು–ಐವತ್ತು ವರ್ಷ ಕರ್ನಾಟಕದಲ್ಲಿ ಅಡ್ಡಾಡಿದರು. ಈಗ ಈ ಸಂಸ್ಥೆಗೆ – ಆ ಬಹುಜನ ಸೇವೆಗೆ – ಸುವರ್ಣ ಜಯಂತಿ ಉತ್ಸವ. ಇಂತಹ ಚಿನ್ನದ ಹಬ್ಬದ ಸಂದರ್ಭದಲ್ಲಿ ಕರ್ನಾಟಕದ ಮನೆಮನೆಗೆ, ಕನ್ನಡದ ಮನಕ್ಕೆ ಒಂದೊಂದು ಬುದ್ಧ ವಚನದ ಸಂದೇಶದ ಹಣತೆಗಳನ್ನು, ಕೈಪಿಡಿಗಳನ್ನು ನೀಡಬೇಕೆಂದು ನಮ್ಮ ಭಂತೇಜಿಯವರ ಅಪೇಕ್ಷೆ. ಈ 50ರ ಹಬ್ಬದಲ್ಲಿ ಸುವರ್ಣ ಜಯಂತಿ ನೆನಪಿಗಾಗಿ – 50 ಕನ್ನಡ ಕೈಪಿಡಿಗಳನ್ನು ಪ್ರಕಟಿಸಿ, ಬುದ್ಧ ನೀಡಿದ ಉಪದೇಶವಾಣಿಯನ್ನು ಮನೆಗೆ – ಮನಕ್ಕೆ ಮುಟ್ಟಿಸುವ ಕಾರ್ಯದ ಕೃತಿ ಇದು.

ಈ ಕೃತಿಯ ಪ್ರಕಟಣೆಗಾಗಿ ದಾನವನ್ನು ನೀಡಿದ ಎಲ್ಲ ದಾನಿಗಳಿಗು ಹೃದಯಪೂರ್ವಕ ಕೃತಜ್ಞತೆಗಳು. ಅವರಿಗೆಲ್ಲ ಈ ಧಮ್ಮದಾನದ ಪುಣ್ಯಫಲದಿಂದ ಬೋಧಿ ದೊರಕಲಿ.

ದಯಮಾಡಿ ಈ ಧಮ್ಮ ಕಾಣಿಕೆಯನ್ನು ಸ್ವೀಕರಿಸಿ, ಭಗವಾನ್ ಬುದ್ಧರ ಮಹಾಕರುಣೆಯು, ನಿಮಗೆ ಸುಖ–ಶಾಂತಿ ಸಮೃದ್ಧಿಯನ್ನು ಹರಸಲಿ ಎಂದು ಹಾರೈಸುತ್ತೇವೆ.

*ಶುಭಾಶಯಗಳೊಡನೆ*

**ಆನಂದ ಭಂತೇಜಿ**
**ಪೂಜ್ಯ ಭಂತೇಜಿಗಳು, ಉಪಾಸಕ/ಉಪಾಸಕಿಯರು**
**ಮಹಾಬೋಧಿ ಸಂಸ್ಥೆಗಳು**

# ಪರಮಪೂಜ್ಯ ಡಾ॥ ಕೆ. ಶ್ರೀ ಧಮ್ಮಾನಂದ ನಾಯಕ ಮಹಾಥೇರ



"ಯಾರ ಆಕಾಂಕ್ಷೆಗಳು, ಸದಾ ಉದಾತ್ತವಾಗಿರುತ್ತದೋ, ಯಾರು ಪರರ ಜೀವನಗಳನ್ನು ಸಾರಯುತವನ್ನಾಗಿ ಮಾಡಿರುವರೋ, ಯಾರು ಪರರ ಜೀವನಗಳಲ್ಲಿ ಶಾಂತಿಯನ್ನು ತರುವವರಾಗಿದ್ದಾರೋ, ಯಾರು ಈ ಜಗವನ್ನು ಜೀವಿಸಲು ಉತ್ತಮವನ್ನಾಗಿ ಮಾಡಿರುವರೋ ಯಾರ ಎಲ್ಲಾ ಕಾರ್ಯಗಳು ಸದಾ ಮೈತ್ರಿಯಿಂದ ಕೂಡಿರುವುದೋ ಮತ್ತು ಯಾರು ಸದಾ ಮುದಿತಾದಲ್ಲೆ ಆನಂದಿಸುವರೋ ಅಂತಹವರು ಸದಾ ಆನಂದವಾಗಿ ಸುಖವಾಗಿ ಇರುತ್ತಾರೆ".

ಇದಕ್ಕೆ ಉದಾಹರಣೆ ಎನಿಸಿದಂತಹ ಈ ಮಹಾ ಪುರುಷರೇ ಡಾ॥ ಕೆ. ಶ್ರೀ ಧಮ್ಮಾನಂದರವರು. ಶ್ರೀಯುತರು 18ನೇ ಮಾರ್ಚಿ 1919ರಲ್ಲಿ ಶ್ರೀಲಂಕದ ಕಿರಿಂದೆ ಎಂಬ ಹಳ್ಳಿಯಲ್ಲಿ ಜನಿಸಿದರು. ಬಾಲ್ಯದಿಂದಲೇ ಬೌದ್ಧಾಸಕ್ತಿ ಹೊಂದಿದ್ದು 12ನೇ ವಯಸ್ಸಿಗೆ ಪೂಜ್ಯ ಕೆ. ಧಮ್ಮರತನ ಮಹಾಥೇರ ಅವರಿಂದ ಸಾಮಣೇರ ದೀಕ್ಷೆ ಪಡೆದರು. 22ನೇ ವಯಸ್ಸಿಗೆ ಉಪಸಂಪದ ಪಡೆದರು. ಇವರು ಶ್ರೀಲಂಕದ ಹಿರಿಯ ಅನೇಕ ನಾಯಕ ಥೇರರಿಂದ ಶಿಕ್ಷಣ ಪಡೆದು, 26ನೇ ವಯಸ್ಸಿಗೆ ಪಾಲಿ ತಿಪಿಟಕದಲ್ಲಿ ಡಿಪ್ಲೊಮಾ ಪಡೆದರು. 1945ರಲ್ಲಿ ಬನಾರಸ್ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದರು. 1949ರಲ್ಲಿ ಎಂ.ಎ. ಪಡೆದರು. ಭಾರತದ ರಾಷ್ಟ್ರಪತಿಯಾಗಿದ್ದ ರಾಧಾಕೃಷ್ಣನ್‌ರವರ ಆಶ್ರಯದಲ್ಲಿ ಸಂಸ್ಕೃತ, ಹಿಂದಿ ಮತ್ತು ಭಾರತದ ತತ್ವಶಾಸ್ತ್ರದಲ್ಲಿ ಅಧ್ಯಯನ ನಡೆಸಿದರು. 'ಶಾಸ್ತ್ರೀಯ' ಪದವಿ ಪಡೆದರು.

ನಂತರ ಬೌದ್ಧ ಧಮ್ಮದ ಉನ್ನತಿಗೆ ನಿರಂತರ ಶ್ರಮಿಸಿದರು. ಹಲವಾರು ಸಂಸ್ಥೆಗಳನ್ನು ಕಟ್ಟಿದರು. ಹಲವಾರು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಾಕಾರರು ಆದರು. ಬಹಳಷ್ಟು ಗ್ರಂಥಗಳನ್ನು ಬರೆದರು.



ಬೌದ್ಧ ಜಗತ್ತಿಗೆ ನಾಯಕರಂತೆ ಬೆಳಗಿದರು. ಅವರು ಅನೇಕ ಪದವಿ ಪಾರಿತೋಷಕಗಳನ್ನು ಪಡೆದರು. ಉದಾಹರಣೆಗೆ ಶಾಸ್ತ್ರೀಯ, ಧಮ್ಮಕೀರ್ತಿ, ಶ್ರೀ ಸದ್ಧಮ್ಮ ವಿಶಾರದ, ಪರಿಯತ್ತಿ ವಿಶಾರದ, ತಿಪಿಟಕಾ, ವಗಿಸ್ವರಚಾರ್ಯ ಮಹೋಪಾಧ್ಯಾಯ, ಬುದ್ಧಶಾಸನ ವಿಭೂಷಣ, ದರ್ಶನ ವಿಶಾರದ, ಸಾಹಿತ್ಯ ಚಕ್ರವರ್ತಿ, ಸಧಮ್ಮ ಪ್ರವತ್ರಿಕಾ ಚಕ್ರವರ್ತಿ, ಪಿ.ಹೆಚ್.ಡಿ.ಗಳು ಇತ್ಯಾದಿ ಪದವಿಗಳನ್ನು ಬಿರುದುಗಳನ್ನು ದೇಶ ವಿದೇಶಗಳಲ್ಲಿ ಪಡೆದರು.

ಶ್ರಿಯುತ ಧಮ್ಮಾನಂದರವರು ಆಧುನಿಕ ಬೌದ್ಧ ಜಗತ್ತಿನಲ್ಲಿ ನಾಯಕರಂತೆ ವಿಜೃಂಭಿಸಿದರು. ಅವರು ಶಾಸನ ಅಭಿವೃದ್ಧಿ ವರ್ಧನಾ ಸೊಸೈಟಿ, ಮಲೇಶಿಯಾದ ಯುವ ಬೌದ್ಧ ಮಂಡಲಿ, ಮಾನವತಾ ತತ್ವ ಸ್ನೇಹ ಗುಂಪಿಗೆ, ವಿದ್ಯಾವರ್ಧನಾ ಪಿರಿವೇಣ ಶ್ರೀಲಂಕಗೆ ಆಶ್ರಯದಾತರಾಗಿದ್ದಾರೆ. ಮಲೇಶಿಯಾದ ಬುದ್ಧಿಷ್ಟ್ ಮಿಷನರಿ ಸೊಸೈಟಿಯ ಧಾರ್ಮಿಕ ನಿರ್ದೇಶಕರು, ಸ್ಥಾಪಕರು ಮತ್ತು ಪ್ರಧಾನ ಸಲಹಾಕಾರರು ಆಗಿದ್ದರು. ಅವರು 50ಕ್ಕೂ ಹೆಚ್ಚು ಬೌದ್ಧ ಸಂಸ್ಥೆಗಳಿಗೆ ಪ್ರಧಾನ ಸಲಹಕಾರ ಆಗಿದ್ದರು. ಮಲೇಶಿಯಾ, ಸಿಂಗಪೂರ, ಶ್ರೀಲಂಕದ ಸಂಘ ಕೌನ್ಸೆಲ್‌ಗೆ ಅಧ್ಯಕ್ಷರಾಗಿದ್ದರು. ಹಾಗು ಹಲವಾರು ದೇಶ ವಿದೇಶ ಸಂಸ್ಥೆಗಳಿಗೆ ನಿರ್ದೇಶಕರು, ಛೇರ್‌ಮನ್, ಸಲಹಾಕಾರರು ಆಗಿದ್ದರು.

ಎಲ್ಲಕ್ಕಿಂತ ಹೆಚ್ಚಾಗಿ ಅವರು ಅದ್ವಿತೀಯ ಲೇಖಕರಾಗಿದ್ದರು. ಸ್ವತಂತ್ರ ಶೈಲಿಯಲ್ಲಿ ಅವರು ಬೌದ್ಧ ದರ್ಶನಗಳನ್ನು ಬರೆದರು. ದೇಶ ವಿದೇಶಗಳಲ್ಲಿ ಧಮ್ಮವನ್ನು ಹರಡಿದರು. ಬೌದ್ಧ ಧಮ್ಮಕ್ಕಿರುವ ಮಿಥ್ಯಾ ಅಪವಾದಗಳನ್ನು ದೂರಿಕರಿಸಿದರು. ಅಲ್ಪ ಕಾಲದಲ್ಲೇ ಅವರು ಶ್ರೀಲಂಕ, ಬರ್ಮ, ಸಿಂಗಪೂರ, ಮಲೇಶಿಯಾ, ಥೈಲ್ಯಾಂಡ್, ಥೈವಾನ್, ಜಪಾನ್, ನ್ಯೂಜಿಲ್ಯಾಂಡ್, ಇಂಗ್ಲೆಂಡ್, ಅಮೆರಿಕಾದಲ್ಲೂ ಅವರು ಜನಪ್ರಿಯತೆ ಪಡೆದರು.

ಪೂಜ್ಯ ಶ್ರೀ ಧಮ್ಮಾನಂದ ಥೇರರು 31ನೇ ಆಗಸ್ಟ್ 2006ರಂದು ಇಹಲೋಕ ತ್ಯಜಿಸಿದರು.

# ಬಹು ಧರ್ಮಗಳ ಸಮಾಜದಲ್ಲಿ ಧಮ್ಮ

ಜಗತ್ತಿನ ಧರ್ಮ ಸಂಸ್ಥಾಪಕರ ಬೋಧನೆ ಮತ್ತು ಸಂದೇಶಗಳಲ್ಲಿ ನಾವು ಕಾಣುವುದು ಏನೆಂದರೆ ಅವರ ಮೂಲ ಉದ್ದೇಶ–ದುಃಖಗಳನ್ನು ನಿವಾರಿಸುವುದು, ಮತ್ತು ಶಾಂತಿ ಹಾಗು ಸುಖಗಳನ್ನು ಮಾನವತೆಗೆ ನೈತಿಕತೆಯ, ಶೀಲವಂತಿಕೆಯ ಮತ್ತು ಸದಾಚಾರದ ಜೀವನದ ಮೂಲಕ ನೀಡುವುದಾಗಿತ್ತು. ಹಾಗಿರುವಾಗಲು ಇಂದು ಜಗತ್ತಿನ ಧರ್ಮಗಳು ಬೃಹತ್ ವ್ಯವಸ್ಥಿತ ಮಾನವತೆರಹಿತ ಸಂಸ್ಥೆಗಳಾಗಿವೆ. ಪರಿಣಾಮವಾಗಿ ಆ ಸಂಸ್ಥಾಪಕರ ನಿಜ ಬೋಧನೆಗಳಾದ ಸರಳತೆ, ಸಂಯಮ, ಸತ್ಯಶೀಲತೆ ಮತ್ತು ನಿಸ್ವಾರ್ಥತೆಗಳು ಕ್ಷಯಿಸಿವೆ ಅಥವಾ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಆ ಮಹಾ ಸದ್ಗುಣಗಳಿಂದ ಆ ಹಿಂಬಾಲಕರು ಅಂತಹ ಪ್ರಭಾವ ಪಡೆಯುತ್ತಿಲ್ಲ. ಧರ್ಮಗಳಲ್ಲಿ ಅಡಕವಾಗಿರುವ ಸದಾಚಾರ ಮತ್ತು ಶಾಂತಿವರ್ಧಕ ಧರ್ಮ ಮೌಲ್ಯಗಳು ಭೌತಿಕತೆಯ ಆಕರ್ಷಣೆಗಳಿಂದ ಮೋಡಗಳಂತೆ ಆವರಿಸಲ್ಪಟ್ಟಿದೆ. ಇಂದು ಜಗತ್ತಿನ ಧರ್ಮಗಳ ಅನೇಕ ಹಿಂಬಾಲಕರು ಒಳಿತನ್ನು (ಧರ್ಮವನ್ನು) ಅಲಕ್ಷಿಸಿದ್ದಾರೆ. ಆ ಕಾರ್ಯದ ನಿಧಿಯನ್ನು ಅವರು ಅಧಿಕಾರಕ್ಕಾಗಿ, ಕೀರ್ತಿಗಾಗಿ ಮತ್ತು ವ್ಯಕ್ತಿಗತ ಲಾಭಕ್ಕಾಗಿ ಬಳಸುತ್ತಿದ್ದಾರೆ. ಈ ರೀತಿಯ ಕ್ರಿಯೆಗಳಿಂದ ಇಂದು ಹಲವು ಆಧುನಿಕ ಧಾರ್ಮಿಕರ ಮನಸ್ಸು ಕಲುಶಿತವಾಗಿದೆ ಮತ್ತು ಅನಾರೋಗ್ಯಕರ ಸ್ಪರ್ಧೆಗಳಿಗೆ ಕಾರಣವಾಗಿದೆ ಮತ್ತು ಧರ್ಮ ಧರ್ಮಗಳ ನಡುವೆ ಹಾಗೆಯೆ ಒಂದೇ ಧರ್ಮದ ಶಾಖೆಗಳ ನಡುವೆ ಒಡಕುಗಳು ಮೂಡಿವೆ. ಭೇದಭಾವಗಳನ್ನು ಕಾಣುತ್ತಿದ್ದೇವೆ.

**ಧರ್ಮ ಅಸಹಿಷ್ಣುತೆ :**

ಯಾವಾಗ ಒಬ್ಬನು ಜಗತ್ತಿನ ಹಲವು ಧರ್ಮಗಳ ಇತಿಹಾಸ ಅಭ್ಯಸಿಸುತ್ತಾನೋ ಹಾಗು ಧರ್ಮಗಳು ಜನರ ಮೇಲೆ ದೀರ್ಘಕಾಲ



ಪರಿಣಾಮ ಯಾವರೀತಿ ಬೀರಿವೆ ಎಂದು ಅರಿತಾಗ ಆಗ ಆತನಿಗೆ ಧರ್ಮದ ಅಸಹಿಷ್ಣುತೆಯಿಂದಾದ ಘೋರ ತಪ್ಪುಗಳು ಅರಿವಾಗುತ್ತದೆ. ಪದಗಳಂತಹ 'ದೌರ್ಜನ್ಯ', 'ಅಸಂಪ್ರದಾಯಸ್ಥ', 'ಪರಧರ್ಮೀಯ', 'ವಿಗ್ರಹ ಆರಾಧಕ', 'ಅಲ್ಪ ಸಂಖ್ಯಾತ' ಮತ್ತು ಇದೇ ಅರ್ಥ ಬರುವಂತಹ ಸಮಾನಾರ್ಥಕ ಪದಗಳೆಲ್ಲಾ ನಿಧಾನವಾಗಿ, ಕ್ರಮವಾಗಿ, ಧರ್ಮದ ಶಬ್ದಕೋಶಗಳಲ್ಲಿ ಸೇರಿತು. ಇವೆಲ್ಲವೂ ಧರ್ಮದ ಹೆಸರಿನಲ್ಲಿ ಧರ್ಮ ಅಸಹಿಷ್ಣುತೆಯನ್ನು ವ್ಯಕ್ತಪಡಿಸುತ್ತದೆ. ಈ ಎಲ್ಲಾ ದೌರ್ಭಾಗ್ಯಯುತ ಘಟನೆಗಳು ಧರ್ಮದ ಮೇಲೆ ಕಳಂಕದ ಕಲೆಗಳನ್ನು ಬಿಟ್ಟು ಹೋಗುತ್ತದೆ. ಇದರಿಂದಾಗಿ ಹಲವು ಚಿಂತನಕಾರರು ವ್ಯವಸ್ಥಿತ ಧರ್ಮದಿಂದ ದೂರ ಸರಿಯುತ್ತಾರೆ. ಅಥವಾ 'ಧಮ್ಮ'ದ ಪದದಿಂದಲೇ ದೂರ ಹೋಗುತ್ತಾರೆ. ಹೀಗಾಗಿ ನಿಜ 'ಧಮ್ಮ'ದ ಮೌಲ್ಯಗಳು ಕ್ಷಿಪ್ರವಾಗಿ ಕ್ರಮೇಣ ಜನರ ಮನಸ್ಸಿನಿಂದ ಮರೆಯಾಗುತ್ತದೆ. ಅಷ್ಟೇ ಅಲ್ಲ, ಧಾರ್ಮಿಕರೆಂದು ಕಾಣಿಸಿಕೊಳ್ಳುವ ಜನರ ಮನಸ್ಸಿನಿಂದಲೂ ಮರೆಯಾಗುತ್ತದೆ. ಈ ದೌರ್ಭಾಗ್ಯಯುತ ರೀತಿಗಳನ್ನು ತಡೆಗಟ್ಟಬೇಕಾದರೆ ಧರ್ಮತತ್ವಗಳ ಬಗ್ಗೆ ಅಭ್ಯಸಿಸಬೇಕಾಗುತ್ತದೆ. ಅವುಗಳ ಸಂಶೋಧನೆ ಮಾಡಬೇಕಾಗುತ್ತದೆ. ಆಗ ಧಮ್ಮದ ಸತ್ಯದ ಮೌಲ್ಯಗಳು ಅರಿವಾಗಿ ನೈಜ ಅರಿವುಂಟಾಗಿ ಭೂತಕಾಲದ ದೌರ್ಭಾಗ್ಯಯುತ ತಪ್ಪುಗಳು ತಡೆಗಟ್ಟಲ್ಪಡುತ್ತದೆ.

**ಧಾರ್ಮಿಕ ಶಿಕ್ಷಣ**

ಒಬ್ಬ, ವಿಭಿನ್ನ ಬಹು ಧರ್ಮಗಳ ಸಮಾಜದಲ್ಲಿ ಶಾಂತಿಯಿಂದ ಹಾಗು ಸೌಹಾರ್ದತೆಯಿಂದ ಸಹಬಾಳ್ವೆ ನಡೆಸಬೇಕಾದರೆ, ಆತನಿಗೆ ಸಾರಯುತವಾದ ಧಾರ್ಮಿಕ ಶಿಕ್ಷಣ ಅತ್ಯಗತ್ಯವಾಗಿ ಬೇಕೇಬೇಕು. ಆ ಶಿಕ್ಷಣವು ನೈತಿಕ ಮತ್ತು ಸದಾಚಾರದ ಮೌಲ್ಯಗಳಿಂದ ಕೂಡಿರುವುದೇ ಪ್ರಥಮ ಮೆಟ್ಟಿಲಾಗಬೇಕು. ಹಾಗೆಯೇ ಉತ್ತಮ ಅರಿವು ಮತ್ತು ಅನ್ಯೋನ್ಯ ಸಹಬಾಳ್ವೆಯು ಎಲ್ಲಾ ಧರ್ಮಗಳಿಗೂ ಬೇಕು. ಎಲ್ಲಾ ಧರ್ಮದವರು ಐಕ್ಯತೆಯಿಂದ ಕೂಡಿರಬೇಕು. ಹಾಗು ಸರ್ವಹಿತದಲ್ಲಿ ಸಹಕಾರ ವ್ಯಕ್ತಪಡಿಸಬೇಕು ಮತ್ತು ಯೋಗ್ಯವಾದ ಹಾಗು ವ್ಯವಸ್ಥಿತವಾದ ಧಾರ್ಮಿಕ

ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಬೇಕು. ಇದು ಕೇವಲ ಒಂದು ಪ್ರತ್ಯೇಕ ಧರ್ಮವಲ್ಲ ಬದಲಾಗಿ ಜಗತ್ತಿನ ಎಲ್ಲಾ ಧರ್ಮದವರು ಅನುಸರಿಸಿ ಪ್ರತ್ಯೇಕ ಜೀವಿಯ ಧಾರ್ಮಿಕ ಮೌಲ್ಯಗಳ ವೃದ್ಧಿಗೆ ಕಾರಣವಾಗಬೇಕು. ಅದರಲ್ಲೂ ಶೀಲದ ಅಥವಾ ನೈತಿಕತೆಯ ಶಿಕ್ಷಣ ಕಡ್ಡಾಯವಾಗಿ ನೀಡಬೇಕು. ಅಂತಹ ಕ್ರಮ ಜಾರಿಗೆ ಬಂದಾಗ ಮಾತ್ರ ಮತಾಂಧತೆ ನಿವಾರಣೆಯಾಗಿ, ಸಂಪ್ರದಾಯದ ಪೂರ್ವಗ್ರಹ ಪೀಡತೆ ದೂರವಾಗಿ ಧರ್ಮಗಳ ನಡುವಿನ ಕ್ರೌರ್ಯಗಳು, ಹೋರಾಟಗಳು ನಿಲ್ಲುತ್ತದೆ. ಮಿಕ್ಕ ವಿಧಾನಗಳೆಂದರೆ ಸರ್ವ ಧರ್ಮ ಸಮ್ಮೇಳನಗಳನ್ನು ನಡೆಸಿ ನಿರಂತರ ಬೋಧನೆ, ಚರ್ಚೆಗಳು, ಸಮಾವೇಶಗಳು ಧರ್ಮ ವೇದಿಕೆಗಳು ನಡೆಸಬೇಕು. ಈ ರೀತಿಯ ಸಹಬಾಳ್ವೆಯಿಂದ ಶಾಂತಿವರ್ಧಕ ಮತ್ತು ಸೌಹಾರ್ದಯುತ ಪ್ರಜ್ಞಾ ಅನ್ವೇಷಣೆಗಳಿಗೆ ಸ್ಫೂರ್ತಿಯುತ ವಾತಾವರಣವಿರುತ್ತದೆ ಹೊರತು ಒಂದು ನಂಬಿಕೆಯವರು ಮತ್ತೊಂದರ ಮೇಲೆ ಶ್ರೇಷ್ಠತ್ವ ಅಧಿಕಾರವಿರುವುದಿಲ್ಲ.

## ಕ್ಷೇಮಾಭಿವೃದ್ಧಿ ಚಟುವಟಿಕೆಗಳು

ಮಿತ್ರತ್ವದ ಸಭೆಗಳನ್ನು ನಡೆಸುವಿಕೆ, ಸಮುದಾಯದ ಸೇವಾ ಕಾರ್ಯಕ್ರಮಗಳು ಸಂಸ್ಥೆಗಳನ್ನು ನಡೆಸುವಿಕೆ, ಮತ್ತಿತರ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ನಡೆಸುವಿಕೆಯಿಂದ ಎಲ್ಲಾ ಧರ್ಮದವರು ಮಾನವತೆಯ ಉದ್ಧಾರದ ಉದ್ದೇಶದಿಂದ, ಸಮಾಜದ ದೌರ್ಭಾಗ್ಯದಲ್ಲಿರುವವರ ಉದ್ಧಾರಕ್ಕಾಗಿ ಬಹಳಷ್ಟು ಮಾಡಬೇಕು. ಇದನ್ನು ಜಾತಿಭೇದ ಮೀರಿ ಸೇವೆ ಸಲ್ಲಿಸಿದಾಗ, ಪರಸ್ಪರ ಅಭಿನಂದನಾ ಮತ್ತು ಅನ್ಯೋನ್ಯ ಗೌರವದಿಂದ ಅಂತರ್ ಧರ್ಮೀಯ ಮಟ್ಟದ ಶಾಂತಿ ಮತ್ತು ಸೌಹಾರ್ದತೆ ನೆಲಸುತ್ತದೆ.

## ಯುವ ಸಂಸ್ಥೆಗಳು

ಧಾರ್ಮಿಕರು ಅಭ್ಯಸಿಸತಕ್ಕಂತಹ ಮತ್ತೊಂದು ಪ್ರಮುಖವಾದ ಭಾಗವೊಂದಿದೆ. ಅದೇ ಯುವ ಸಂಸ್ಥೆಗಳು ಮತ್ತು ಅದಕ್ಕೆ ಸಂಬಂಧಿಸಿ ದಂತಹ ಚಟುವಟಿಕೆಗಳು. ಇಂದಿನ ಯುವಕರೇ ನಾಳಿನ ಪೋಷಕರು, ಅವರು ಇಂದಿನ ಯುಗದ ಅವನತಿಯಲ್ಲಿ ಬೀಳದಂತೆ ಅಲ್ಲಿಯೇ



ಉಳಿಯದಂತೆ ನೋಡಿಕೊಳ್ಳಬೇಕು. **ಎಲ್ಲಾ ಯುವಶಕ್ತಿಯನ್ನು ಮತ್ತು ಯುವ ಸಂಪನ್ಮೂಲವನ್ನು ಯೋಗ್ಯವಾದ ಕಡೆಗೆ ತಿರುಗಿಸಿ ಸುರಚನಾತ್ಮಕ ಉದ್ದೇಶಗಳ ಕಡೆಗೆ ತಿರುಗಿಸಿ, ಯೋಗ್ಯವಾಗಿ ಬಳಸಬೇಕು.** ಅವರಲ್ಲಿ ನೈಜಧರ್ಮ ಜಾಗೃತಿ ಮೂಡಿಸಬೇಕು. ಧರ್ಮದ ಮೂಲ ತತ್ವಗಳ ಜಾಗ್ರತೆ ಉಂಟುಮಾಡಿ, **ಸಮಾಜದಲ್ಲಿ ಶಾಂತಿವರ್ಧಕ ಹಾಗು ಸೌಹಾರ್ದಯುತ ಸಮಾಜ ನಿರ್ಮಾಣ ಮಾಡಬೇಕೇ ಹೊರತು ಪರಧರ್ಮೀಯರಲ್ಲಿ ದ್ವೇಷ ಹಾಗು ವಿಷಕಾರುವಂತೆ ಮಾಡಬಾರದು.** ನಾವು ಅವರಲ್ಲಿ ಯೋಗ್ಯವಾಗಿ ಮಾರ್ಗದರ್ಶನ ಉಂಟುಮಾಡಿದರೆ ಯೋಗ್ಯ ತತ್ವಗಳಾದ ಸಹನೆ, ತಾಳ್ಮೆ, ಕ್ಷಮೆ ಮತ್ತು ಪ್ರಜ್ಞೆ ಇವುಗಳ ಪ್ರಚೋದನೆ ಮಾಡಿದರೆ ಇಂದಿನ ಯುವಕರು ಶ್ರೇಷ್ಠ ಸಾಧಕರಾಗಿ-ಶ್ರೇಷ್ಠತರವಾಗಿ ಧಾರ್ಮಿಕ ಸೌಹಾರ್ದತೆ ಮತ್ತು ಅನ್ಯೋನ್ಯ ಸಹಕಾರದಿಂದ ಮುಂದು ಎಂದೆಂದೂ ಶ್ರೇಷ್ಠ ಧಾರ್ಮಿಕರಾಗಿ ಪರಸ್ಪರ ಸೌಹಾರ್ದತೆಯಿಂದ ಸದಾ ಜೀವಿಸುತ್ತಾರೆ.

## ಸಹನೆ ಮತ್ತು ಗೌರವ

ಸಹನೆ ಮತ್ತು ಗೌರವ ಇವೆರಡು ಇಂದಿನ ಬಹುಧರ್ಮಗಳ ಸಮಾಜದ ಮನಸ್ಸಿನಲ್ಲಿ ಹುಟ್ಟಲೇಬೇಕಾದ ಶಕ್ತಿಯುತ ಪದಗಳಾಗಿವೆ. ಒಬ್ಬನು ಸಹನೆಯನ್ನು ಬೋಧಿಸಿದರೆ ಸಾಲದು, ಬದಲಾಗಿ ಪ್ರತಿ ಸನ್ನಿವೇಶದಲ್ಲೂ ಪ್ರಯತ್ನಿಸಿ ಅಳವಡಿಸಬೇಕಾದ ತತ್ವವಾಗಿದೆ. ಸಹನೆಯ ಅನುಷ್ಠಾನದಿಂದ ಶಾಂತಿಯ ಮತ್ತು ಸೌಹಾರ್ದತೆಯ ಅದ್ಭುತವಾದ ವಾತಾವರಣವು ಸೃಷ್ಟಿಯಾಗುತ್ತದೆ. ಪರಧರ್ಮಿಯರ ಕೆಲವು ಆಚರಣೆಗಳಲ್ಲಿ ಅಂತರ್ಗತ ವಾಗಿರುವ ಕೆಲವು ಮೌಲ್ಯಗಳನ್ನು ನಾವು ಅರಿಯಲಾರೆವು. ಹಾಗು ಅಭಿನಂದಿಸಲಾರೆವು. ಹಾಗೆಯೇ ಪರಧರ್ಮೀಯ ಸಹಾ ನಮ್ಮ ಸಾಧನೆ ಅಥವಾ ಆಚರಣೆಗಳನ್ನು ಅರ್ಥಮಾಡಿಕೊಳ್ಳುವುದಾಗಲಿ, ಅಭಿನಯಿಸುವು ದಾಗಲಿ ಮಾಡಲಾರರು. ನಾವು ಪರಧರ್ಮೀಯರಿಂದ ವ್ಯಂಗ್ಯಕ್ಕೆ ಗುರಿಯಾಬಾರದು ಎಂದು ಇಚ್ಛಿಸಿದರೆ ನಾವು ಸಹಾ ಪರರಿಗೆ ವ್ಯಂಗ್ಯ ಮಾಡಬಾರದು. ನಾವು ಪರಧರ್ಮೀಯರ ಆಚರಣೆಯನ್ನು ಅರಿಯಲು

ಪ್ರಯತ್ನಿಸಿದಾಗ ನಮ್ಮ ಅರಿವು ಸ್ಪಷ್ಟವಾಗಿ ಅವರನ್ನು ಚೆನ್ನಾಗಿ ಅರ್ಥಮಾಡಿ ಕೊಳ್ಳುವೆವು. ಹೀಗಾಗಿ ಬಹುಧರ್ಮದವರಲ್ಲಿ ಸಹನೆ ಸ್ಥಾಪಿತವಾಗುತ್ತದೆ.

ಗೌರವವು ಗೌರವವನ್ನು ಉತ್ಪಾದಿಸುತ್ತದೆ ಎಂದು ಹೇಳಲಾಗಿದೆ. ನಾವು ಪರಧರ್ಮೀಯರಿಂದ ನಮ್ಮ ಧಾರ್ಮಿಕ ಆಚರಣೆಗೆ ಗೌರವ ಅಪೇಕ್ಷಿಸಿದರೆ ಪ್ರತಿಯಾಗಿ ನಾವು ಸಹ ಪರರ ಆಚರಣೆಗಳಿಗೆ ಗೌರವಿಸಬೇಕು. ಖಂಡಿತವಾಗಿಯು ಇಂತಹ ಆಚರಣೆಯ ಬಹು ಧರ್ಮೀಯರ ಸಮಾಜದಲ್ಲಿ ಮೃದುವಾದ ಹೃದ್‌ಭರಿತ ಸಂಬಂಧಗಳನ್ನು ಸೃಷ್ಟಿಸುತ್ತದೆ.

ಇಂತಹ ಪ್ರಾಯೋಗಾತ್ಮಕ ಸಹನೆಯ ಮತ್ತು ಪರಸ್ಪರ ಗೌರವದ ಉತ್ಸಾಹದ ಅಲೆಗಳು ಅನ್ವಯವಾಗದಿದ್ದರೆ ನಮ್ಮ ಸಮಾಜ ಮತ್ತು ದೇಶಗಳಲ್ಲಿ ಪಕ್ಷಪಾತದ ಕುರೂಪ ಕಾಲಕೂಟವು, ವ್ಯಂಗ್ಯಗಳು ಮತ್ತು ನಿಷ್ಕೃಷ್ಟ ದ್ವೇಷವು ಶಾಂತಿ ಮತ್ತು ಸಮಾಧಾನಗಳನ್ನು ನಾಶಪಡಿಸುತ್ತದೆ. ಕೆಲವು ದೇಶಗಳಲ್ಲಿ ಧರ್ಮ ಸಹಿಷ್ಣುತೆಯ ಉತ್ಸಾಹ ಮತ್ತು ಪರಸ್ಪರ ಗೌರವದ ಅಭಾವವಿರುವುದರಿಂದಾಗಿ ಆ ದೇಶಗಳಲ್ಲಿ ನಾವು ಕೊಲೆಗಳು, ಬೆಂಕಿ ಹಚ್ಚಿ ಆಸ್ತಿ ನಾಶಪಡಿಸುವಿಕೆ, ಲೂಟಿ, ನಾಶ ಮುಂತಾದವುಗಳನ್ನು ನಾವು ಪ್ರತ್ಯೇಕವಾಗಿ ಕಾಣಬಹುದು. ಅಂತಹ ಪ್ರಜ್ಞಾರಹಿತ ಕ್ರಿಯೆಗಳು ಅಪಾರ ಜೀವಹಾನಿ, ಮತ್ತು ಆಸ್ತಿಹಾನಿಗಳನ್ನು ಉಂಟುಮಾಡಿವೆ. ಯಾರು ಶಾಂತಿ ಮತ್ತು ಸೌಹಾರ್ದತೆಯಲ್ಲಿ ಆನಂದಿಸುವರೋ ಅವರಿಗೂ ಕಣ್ತೆರೆಸಿ ಅಂತಹುದರಲ್ಲೇ ಆನಂದಿಸುವಂತೆ ಮಾಡಿದೆ. ಎಲ್ಲಾ ಸಹ–ಧರ್ಮೀಯರು ಮಿತ್ರತ್ವಕ್ಕೆ, ಮೈತ್ರಿಗೆ ಮತ್ತು ಸಹಬಾಳ್ವೆಗೆ ಕೈಜೋಡಿಸಲಿ, ಸೌಹಾರ್ದಯುತ ಮತ್ತು ಪ್ರಶಾಂತ ಸಮಾಜಕ್ಕಾಗಿ ಶಾಂತಪ್ರಿಯ ನಾಗರಿಕರೆಲ್ಲರೂ ಪರಸ್ಪರ ಸ್ನೇಹೋತ್ಸಾಹದಲ್ಲಿ ಬೆರೆಯಲಿ.

**ಜೀವನದಲ್ಲಿ ಪರಮಾರ್ಥ ನೋಟಗಳು**

ಜೀವನವು ಕಾಲ ಪರಿಮಿತಿಯಲ್ಲಿರುವ ಅತ್ಯಲ್ಪ ಅವಧಿಯಾಗಿದೆ. ನಾವು ಪ್ರಾಪಂಚಿಕತೆಗಾಗಿ ತೀವ್ರ ದಾಹ ಪಡುವೆವು. ಆದರೆ ನಾವು ಪರಮಾರ್ಥದ ಅತ್ಯಾವಶ್ಯಕತೆಯನ್ನು ನಾವು ನಿರ್ಲಕ್ಷಿಸಬಾರದು. ಅದು



ನಮಗೆ ನಮ್ಮ ಜ್ಞಾನ ವೃದ್ಧರಿಂದ ಬಂದುದ್ದಾಗಿದೆ. ನಾವು ಪರಿಶುದ್ಧವಾದ ಮತ್ತು ಪರಮ ಶ್ರೇಷ್ಠವಾದ ಬೋಧನೆಗಳನ್ನು ಸಾಧನೆಗೆ ಇಳಿಸಿ ನಮ್ಮ ಜೀವನಗಳನ್ನು ಧನ್ಯಭರಿತವನ್ನಾಗಿಸಬೇಕು. ನಮ್ಮ ಹಿರಿಯರು ಗೌರವಯುತ ವಾದ, ಸಭ್ಯ ಮತ್ತು ಉಪಯೋಗಯುತ ಜೀವನವನ್ನು ಆಚರಿಸಿದ್ದಾರೆ. ಸಾಧ್ಯವಾದೆಡೆಯೆಲ್ಲಾ ಒಳಿತನ್ನು ಆಚರಿಸುತ್ತಾ, ಸರ್ವಕಾಲದಲ್ಲೂ ಪಾಪವನ್ನು ವರ್ಜಿಸಿದ್ದಾರೆ, ತಡೆದಿದ್ದಾರೆ. ಜಗತ್ತಿನ ಎಲ್ಲಾ ಧರ್ಮ ಗುರುಗಳಿಂದ ಬಂದಿರುವ ಸಂದೇಶ ಇದೇ ಆಗಿದೆ. ಏನೆಂದರೆ ಎಲ್ಲಾ ಮಾನವರು ಪರಮಾರ್ಥದ ಅತ್ಯವಶ್ಯಕತೆ ಅರಿತು, ಸರ್ವಮಾನವರ ಒಳಿತನ್ನು ಬಯಸುತ್ತಾ ಪರಮಾರ್ಥದ ವಿಷಯಗಳನ್ನು ಎತ್ತಿಹಿಡಿಯುತ್ತ ಶಾಂತಿ ಮತ್ತು ಸೌಹಾರ್ದತೆಯನ್ನು ತರುವುದು.

**ಧರ್ಮದ ಪ್ರಸರಿಸುವಿಕೆ :**

ಯಾವುದೇ ಧರ್ಮ ಪ್ರಸರಿಸಲು ಆ ಧರ್ಮದ ಶ್ರೇಷ್ಠ ಮತ್ತು ಅತಿಪ್ರಧಾನವಾದ ಅಂಶಗಳನ್ನು ಮುಂದಿಡುವುದು ಅತ್ಯವಶ್ಯಕವಾಗಿದೆ. ಅಂತಹ ರೇಖೆಯನ್ನೇ ನಿರೀಕ್ಷಿಸಲಾಗುತ್ತದೆ. ಏಕೆಂದರೆ ಆಕರ್ಷಕ ಅಥವಾ ಆಸಕ್ತಿಭರಿತ ಮುಂಭಾಗವನ್ನು ಗಮನಹರಿಸಲು ಸ್ಥಾಪಿಸುತ್ತಾರೆ. ಉತ್ತಮವಾದ ಹೆಜ್ಜೆಯನ್ನು ಮುಂದಿಟ್ಟು ಎಲ್ಲಾ ಧಾರ್ಮಿಕರು ಸ್ಥಾಪಿಸುತ್ತಾರೆ. ಉತ್ತಮವಾದ ಹೆಜ್ಜೆಯನ್ನೇ ಮುಂದಿಡುವುದು ಎಲ್ಲಾ ಧಾರ್ಮಿಕರಿಗೂ ನ್ಯಾಯಬದ್ಧವಾಗಿದೆ. ತಮ್ಮ ಧರ್ಮದ ಸಾಮಗ್ರಿಗಳನ್ನು ಮಾರುವಾಗ ಇದು ಸರ್ವಸಾಮಾನ್ಯ ವಾಗಿದೆ. ಹಾಗಿರುವಾಗಲು ಬಹು ಧರ್ಮೀಯ ಸಮಾಜದಲ್ಲಿ ಸ್ಪರ್ಧೆಗಳು ಸಾಮಾನ್ಯ, ಅಲ್ಲಿ ಕೆಲವು ಭಕ್ತಾದಿಗಳು ಅಥವಾ ಪರಿವರ್ತನೆ ಹೊಂದುವವರು ಪ್ರಶ್ನಿಸುತ್ತಾರೆ. ಅಂತಹ ಕಡೆ ಧಾರ್ಮಿಕ ನಾಯಕರು ಚಾಡಿ ಹೇಳುವಿಕೆ, ಟೀಕಿಸುವಿಕೆ ಅಥವಾ ಪರನಂಬಿಕೆಗಳ ಬಗ್ಗೆ ಕೆಟ್ಟದ್ದಾಗಿ ಹೇಳಬಾರದು. ಆದ್ದರಿಂದ ಧರ್ಮಪ್ರಚಾರಕರು ಸುಂದರವಾದದ್ದು, ಆಕರ್ಷಕವಾದದ್ದು ಮತ್ತು ಲಾಭದಾಯಕವಾದದ್ದನ್ನು ಹೇಳಬೇಕು ಹೊರತು ಪರಧರ್ಮೀಯರಲ್ಲಿನ ಹುಳುಕುಗಳನ್ನು ತೋರಿಸಿ ಆ ನಂಬಿಕೆಗಳು ಸುಳ್ಳು ಮತ್ತು ಆಚರಣೆಗಳು ಮಿಥ್ಯ ಎಂದು ಹಾರಾಡಿ ತನ್ನದೇ ಧರ್ಮ ಶ್ರೇಷ್ಠ

ಮತ್ತು ಅಪ್ಪಟ ಎಂದು ಆಡಬಾರದು. ಹಾಗೆ ಮಾಡಿ ಪರಧರ್ಮೀಯರ ಬೆನ್ನಿಗೆ ಚೂರಿ ಇರಿಯಬಾರದು. ಅಂತಹ ಮನೋಭಾವವು ಕೆಟ್ಟಭಾವಾವೇಶಗಳನ್ನು ಸೃಷ್ಟಿಸುತ್ತದೆ ಮತ್ತು ಪರಧರ್ಮೀಯರಲ್ಲಿ ಆಕ್ರೋಶ ಉಂಟುಮಾಡುತ್ತದೆ. ನಿಜಕ್ಕೂ ಗೌರವಯುತವಾದ ಯಾವುದೇ ಧರ್ಮದ ಉದ್ದೇಶ ಹಾಗಿರುವುದಿಲ್ಲ, ಹಾಗು ಧರ್ಮ ಎಂದು ಕರೆಸಿಕೊಳ್ಳಲು ಅರ್ಹತೆ ಇರುವುದಿಲ್ಲ.

ವಾಸ್ತವವಾಗಿ ಎಲ್ಲಾ ಧರ್ಮಗಳು ಇರುವುದು ಮಾನವರ ಒಳಿತಿಗಾಗಿಯೇ. ಹಾಗು ಜಗತ್ತಿನ ಎಲ್ಲಾ ಶ್ರೇಷ್ಠ ಗುರುಗಳು ಬೋಧಿಸಿದ್ದು, ಶಾಂತಿ ಮತ್ತು ಮನುಕುಲದ ಸೌಹಾರ್ದತೆಯನ್ನೇ ಅಲ್ಲವೇ? ಗೌರವಯುತ ಧಾರ್ಮಿಕ ನಾಯಕರು ತಮ್ಮ ಪ್ರಜ್ಞಾಶಕ್ತಿಯಿಂದಾಗಿ ಮಾನವತೆಯ ಒಳಿತಿಗಾಗಿ, ದಯೆ ಮತ್ತು ಸುಶೀಲತ್ವವನ್ನು ಬೋಧಿಸಿದ್ದು ವಿಮೋಚನೆಗಾಗಿಯೇ ಅಲ್ಲವೇ? ಶ್ರೇಷ್ಠ ಧರ್ಮಗುರುಗಳು ಎಂದಿಗೂ ಮತ ಧರ್ಮಗಳನ್ನು ಸೃಷ್ಟಿಸಿಲ್ಲ ಅಥವಾ ಪರಧರ್ಮೀಯರ ಬಗ್ಗೆ ಅವಹೇಳನ ಮಾಡಿ ಕೋಲಾಹಲವನ್ನು ನಿರ್ಮಿಸಿಲ್ಲ, ಜನರಲ್ಲಿ ತಪ್ಪು ತಿಳುವಳಿಕೆ ಮತ್ತು ಘರ್ಷಣೆಯನ್ನು ಉಂಟುಮಾಡಿಲ್ಲ. ಅವರೆಲ್ಲರೂ ಸುಚಾರಿತ್ರರು ಹಾಗು ಮಾನವತೆಯ ಕ್ಷೇಮಾಭಿವೃದ್ಧಿಗೆ ಹೃದಯವನ್ನು ಅರ್ಪಿಸಿದ್ದರು. ಅವರೆಲ್ಲರ ಏಕೈಕ ಗುರಿ ಎಂದರೆ ಪ್ರತಿಯೊಬ್ಬರಿಗೂ ಒಳಿತು ಹಾಗು ಸೌಹಾರ್ದತೆಯ ವಾತಾವರಣ ಮತ್ತು ಸುಖ ಸೌಲಭ್ಯ ಶಾಂತಿಯನ್ನು ನೀಡುವುದೇ ಆಗಿತ್ತು.

ವಾಸ್ತವವೆಂದರೆ ಜಗತ್ತಿನ ಧಾರ್ಮಿಕ ನಾಯಕರು ಜಗತ್ತಿನ ಹಲವು ಪ್ರದೇಶಗಳಲ್ಲಿ ವಿಭಿನ್ನ ಕಾಲಗಳಲ್ಲಿ ಕಾಣಿಸಿಕೊಂಡರು. ಅವರು ಸ್ಪಷ್ಟವಾಗಿ ವಿಭಿನ್ನ ನಂಬಿಕೆಗಳನ್ನು ಸೃಷ್ಟಿಸಿದರು ಮತ್ತು ಆಚರಣೆಗಳನ್ನು ತಂದರು. ಅವೆಲ್ಲವೂ ವಿಭಿನ್ನ ವಾತಾವರಣಕ್ಕೆ ವಿಭಿನ್ನ ಸ್ಥಳಗಳಲ್ಲಿ ಜೀವಂತವಾಗಿದೆ. ಪ್ರತಿ ಧಾರ್ಮಿಕ ನಾಯಕರಿಗೂ ತಮ್ಮದೇ ಆದ ನಿಲುವುಗಳಿತ್ತು, ನಂಬಿಕೆಗಳಿತ್ತು, ಹಾದಿಗಳಿತ್ತು ಮತ್ತು ಬೋಧನೆಗಳಿತ್ತು. ಅದರ ಜೊತೆಗೆ ಸಂಸ್ಕೃತಿಯು ಇತ್ತು. ಹೀಗಾಗಿ ವಿಭಿನ್ನ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ಉದಯಿಸಿದವು.



**ಸನ್ನಿವೇಶಗಳಿಗೆ ಬಲಿ**

ಒಂದುವೇಳೆ ಮಗುವೊಂದು ಕ್ರೈಸ್ತರ ಕುಟುಂಬದಲ್ಲಿ ಹುಟ್ಟಿದರೆ ಬೇರೆ ದಾರಿಯೇ ಇಲ್ಲ. ಅದನ್ನು ಕ್ರೈಸ್ತರ ನಂಬಿಕೆ ಮತ್ತು ಸಂಪ್ರದಾಯದಂತೆ ಪೋಷಿಸಬೇಕು. ಹಾಗೆಯೇ ಮಗುವು ಮುಸ್ಲಿಮರ ಕುಟುಂಬದಲ್ಲಿ ಜನಿಸಿದ್ದರೆ ಅದನ್ನು ಇಸ್ಲಾಂ ನಂಬಿಕೆ ಮತ್ತು ಸಂಪ್ರದಾಯದಂತೆಯೇ ಪೋಷಿಸಬೇಕು ಮತ್ತು ಬೌದ್ಧರ ಮಗು ಬೌದ್ಧ ಹಾದಿಯಲ್ಲಿಯೇ ಪೋಷಿಸಲ್ಪಡಬೇಕು. ಹಾಗೆಯೇ ಹಿಂದುವಿನ ಮಗು ಹಿಂದುವಿನಂತೆಯೇ ಪೋಷಿಸಬೇಕು. ನಾವೆಲ್ಲರೂ ಸನ್ನಿವೇಶಗಳಿಗೆ ಬಂಧಿಯಾಗಿರುವೆವು. ವಾತಾವರಣ, ಧರ್ಮ, ಜನಾಂಗ ಮತ್ತು ಸಂಸ್ಕೃತಿಗಳ ಮೇಲೆ ನಮ್ಮ ನಿಯಂತ್ರಣವಿಲ್ಲದೆ ಹೋಗಿದೆ. ಯಾವುದಾದರು ಮಗು ಸಿಕ್ಕರೆ ಅದನ್ನು ಆ ಮಗುವಿನ ತಂದೆ ತಾಯಿಯರ ಧರ್ಮದಂತೆಯೇ ಅದನ್ನು ಪೋಷಿಸಬೇಕು. ನಮ್ಮ ತಂದೆ-ತಾಯಿಯರ ನಂಬಿಕೆಗಳು ನಮ್ಮ ಜೀವನದ ಸಂಸ್ಕೃತಿಯ ಹಿನ್ನೆಲೆಯಾಗಿದೆ.

ಪ್ರತಿ ಧಾರ್ಮಿಕರು ಪ್ರತಿಯೊಬ್ಬ ವಾತಾವರಣ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಬೇಕು. ಹಾಗೆಯೇ ಪ್ರತಿಯೊಬ್ಬನಿಗೂ ಆತ ಏನಾಗಿರುವನೋ ಯಾವುದನ್ನು ನಂಬಿ ಜೀವಿಸುತ್ತಿರುವನೋ ಅದಕ್ಕೆ ಗೌರವಿಸಬೇಕು. ಹೊರತು ತನ್ನ ನಂಬಿಕೆಗಳನ್ನು ಮತ್ತೊಬ್ಬರ ಕತ್ತಿನಲ್ಲಿ ಇರಿಯಬಾರದು. "ನನ್ನ ಧರ್ಮವೇ ನಿಜವಾದ ಧರ್ಮ, ಆದ್ದರಿಂದ ನೀನು ನನ್ನ ಧರ್ಮವನ್ನು ಅಪ್ಪಲು ಸಿದ್ಧನಾಗು, ನೀನು ಸ್ವೀಕರಿಸಲೇಬೇಕು. ಏಕೆಂದರೆ ನಿನ್ನ ಧರ್ಮ ಮಿಥ್ಯ ಧರ್ಮವಾಗಿದೆ" ಎಂದು ಜಂಬಕೊಚ್ಚಿ ಬಲವಂತ ಮಾಡಬಾರದು. ಒಬ್ಬನಿಗೆ ಮಾಂಸ ಅಮೃತವಾದರೆ ಮತ್ತೊಬ್ಬನಿಗೆ ಕಾಲಕೂಟ ವಿಷವಾಗಿರುತ್ತದೆ. ಯಾವುದೇ ಒತ್ತಡವಿಲ್ಲ, ಯಾವುದೇ ಕಡ್ಡಾಯವಿಲ್ಲ ಅಥವಾ ಯಾವುದೇ ಬಲವಂತವಿಲ್ಲ. ಈ ರೀತಿಯ ಸ್ವತಂತ್ರ ಮನೋಭಾವವು ಬಹುಧರ್ಮೀಯರ ಸಮಾಜದಲ್ಲಿ ಪಾಲಿಸಿದಾಗ ಮಾತ್ರ ಶಾಂತಿ ಮತ್ತು ಸೌಹಾರ್ದತೆ ನೆಲಸುತ್ತದೆ.

## ಸಂಚಾರಿ ಮಾರಾಟಗಾರ

ಬಹಳಷ್ಟುಬಾರಿ ಗೃಹಸ್ಥರು ದೂರುಗಳನ್ನು ಹೇಳುವುದನ್ನು ನಾವು ಕೇಳಿದ್ದೇವೆ. ಅಸ್ವಾಗತೀಯ ಚಲಿಸುವ ಮಾರಾಟಗಾರನು ತನ್ನ ಧಾರ್ಮಿಕ ವಸ್ತುಗಳನ್ನು ಕೂಗಾಡುತ್ತಾ ಮಾರಾಟ ಮಾಡುತ್ತಾನೆ. ಆತನ ವಸ್ತುಗಳು ಮಾರಾಟವಾಗಿರುವುದಿಲ್ಲ. ಉಪಯುಕ್ತವೋ ಅಥವಾ ಅನುಪಯುಕ್ತವೋ ಅವೆಲ್ಲಾ ಸಂದೇಹಾಸ್ಪದವಾಗಿರುತ್ತದೆ. ಆತನು ಅಲ್ಪಜ್ಞಾನವನ್ನು ಹೊಂದಿರಬಹುದು. ಆದರೂ ಆತನ ಪ್ರಚಾರ ವೈಖರಿ ಒತ್ತಡತರಿಸಿ ಮಾರಾಟ ಮಾಡುವುದು ನಿಜಕ್ಕೂ ಕಿರಿಕಿರಿಯೇ ಸರಿ. ಅವರು 'ಬೇಡ' ಎಂದು ಹೇಳುವ ಸೌಜನ್ಯ ನುಡಿಯನ್ನು ಅರ್ಥವೇ ಮಾಡಿಕೊಳ್ಳುವುದಿಲ್ಲ. ಅವರು ಬಲವಂತ ಮಾಡುವರು. ಅದನ್ನು ಕೊಂಡರೆ ಸ್ವರ್ಗಕ್ಕೆ ಏಣಿ ಎಂಬಂತೆ ವಾತನಾಡುವರು. ಅವರು ಗಮನಿಸುವುದೇ ಇಲ್ಲ, ಚಿಂತಿಸುವುದಂತೂ ಮೊದಲೇ ಇಲ್ಲ. ತಮ್ಮ ಮಾರಾಟದಿಂದ ಅವರ ಧಾರ್ಮಿಕ ಮನೋಭಾವಕ್ಕೆ ಧಕ್ಕೆ ಎಂಬ ಚಿಂತನೆಯೇ ಅವರಲ್ಲಿಲ್ಲ. ಅಂತಹ ಧಾರ್ಮಿಕ ವಸ್ತುಗಳ ಮಾರಾಟವು ತುಚ್ಚವೇ ಹೊರತು ಧರ್ಮವನ್ನು ಉದ್ಧರಿಸುವುದಿಲ್ಲ. ಅದಕ್ಕೆ ಶೋಭೆ ನೀಡುವುದಿಲ್ಲ. ಯಾರೇ ಆಗಲಿ ಪರಧರ್ಮೀಯರ ಗ್ರಂಥಗಳನ್ನು ಓದಿ ಆ ಧರ್ಮಕ್ಕೆ ಸೇರಿ ಎಂದರೆ ಯಾರೂ ಇಷ್ಟಪಡುವುದಿಲ್ಲ. ಇಲ್ಲದೆ ಹೋದರೆ ನಿತ್ಯ ನರಕ ಕಾದಿದೆ ಎಂದರೆ ಅದು ಬಾಲಿಷ ಪ್ರವೃತ್ತಿಯಲ್ಲವೇ? ಪ್ರತಿಯೊಬ್ಬರು ಪಕ್ವ ಚಿಂತನೆಯ ವ್ಯಕ್ತಿಯನ್ನು ಗೌರವಿಸುತ್ತಾರೆ. ಪ್ರತಿಯೊಬ್ಬರಿಗೂ ತನ್ನ ಚಿಂತನೆಯಿಂದ ಯಾವ ಧರ್ಮ ಸ್ವರ್ಗ ನೀಡುವುದೋ ಅಥವಾ ನರಕ ನೀಡುವುದೋ ಆ ನಿರ್ಧಾರ ಶಕ್ತಿ, ಆಯ್ಕೆ ಸ್ವತಂತ್ರ ಆತನಿಗೆ ಇರುತ್ತದೆ. ಅಷ್ಟೇ ಅಲ್ಲದೆ ನಮ್ಮ ಸಂವಿಧಾನದ ಪ್ರಕಾರ ಯಾರಿಗೇ ಪೂಜಿಸಲು ನಾವು ಸ್ವತಂತ್ರರು.

ಬಹು ಜನಾಂಗೀಯ ಮತ್ತು ಬಹು ಧರ್ಮೀಯ ಸಮಾಜದಲ್ಲಿ ನಿರ್ಧರಿಸುವುದೇನೆಂದರೆ ಸಹ ಧರ್ಮೀಯರು ತಮ್ಮನ್ನು ಸ್ವ-ಅವಹೇಳನ ವಾಗುವಂತಹ ರೀತಿಯಲ್ಲಿ ಬಾಗಬಾರದು. ಹಾಗೆಯೇ ಪರಧರ್ಮೀಯರು



ಅಪಮಾನವಾಗುವ ರೀತಿಯಲ್ಲಿ ಮಾತನಾಡಬಾರದು. ಏಕೆಂದರೆ ಆ ಧಾರ್ಮಿಕ ನಾಯಕರನ್ನು ಅವರ ಶತಮಾನಗಳಿಂದ ನಂಬಿ ಪೂಜಿಸುತ್ತಾ ಬಂದಿರುತ್ತಾರೆ. ಧಾರ್ಮಿಕ ವೇದಿಕೆಗಳಲ್ಲಿ ಒಂದು ಧರ್ಮದವರಿಗೆ ತಮ್ಮ ಧರ್ಮದ ಬಗ್ಗೆ ಹಾಡಿ ಹೊಗಳುವಂತಹ ಶ್ಲಾಘಿಸುವಂತಹ, ಸ್ತುತಿವಂತಹ ಸ್ವತಂತ್ರ ಖಂಡಿತವಾಗಿಯು ಇದೆ. ಆದರೆ ಹಾಗೆಯೇ ಪರಧರ್ಮೀಯರ ಬಗ್ಗೆ ಅವಹೇಳನವಾಗುವಂತಹದುದನ್ನು ಮಾಡಬಾರದು. ಪರರು ತಾವೇ ನಿರ್ಧರಿಸಲಿ, ತಾವೇ ಸ್ವತಂತ್ರವಾಗಿ ಶ್ರೇಷ್ಠ ಧರ್ಮವನ್ನು ಅಪ್ಪಲಿ. ಒಬ್ಬ ಮನುಷ್ಯ ತನಗೆ ಒಳಿತೆಂದು ಭಾವಿಸುವ ಧರ್ಮವನ್ನು ಆಯ್ಕೆ ಮಾಡಲು ಸ್ವತಂತ್ರ ಮನೋಭಾವದಲ್ಲಿರಬೇಕು. ಕೆಲವು ಧರ್ಮ ಮಾರಾಟಗಾರರ ಆಮಿಷ, ಒತ್ತಡ, ಒತ್ತಾಯಕ್ಕೆ ಮಣಿದು ಮತ ಸ್ವೀಕರಿಸಬಾರದು. ಈ ಬಹು ಧರ್ಮೀಯ ಸಮಾಜದಲ್ಲಿ ಪ್ರತಿಯೊಬ್ಬನು ತನ್ನ ಧರ್ಮವನ್ನು ಶ್ಲಾಘಿಸಿ ಸ್ತುತಿಸಲಿ, ಆದರೆ ಪರಧರ್ಮೀಯರಿಗೆ ಕೆಸರು ಎರಚುವುದರಿಂದ ದೂರವಿರಲಿ, ಕೆಸರು ಎರಚುವುದರ ಪರಿಣಾಮ ಭೀಕರವಾಗಿರುತ್ತದೆ.

## ರಾಜಕೀಯ ಮತ್ತು ಧರ್ಮ

ಮತ್ತೊಂದು ವಿಷಯ ನಾವು ನಿರ್ಧರಿಸತಕ್ಕದ್ದು ಏನೆಂದರೆ ಈ ಬಹು ಧಾರ್ಮಿಕ ಸಮಾಜದಲ್ಲಿ ಶಾಂತಿ ಮತ್ತು ಪ್ರಶಾಂತತೆ ನೆಲೆಸಬೇಕಾದರೆ ರಾಜಕೀಯ ಮತ್ತು ಜನಾಂಗೀಯ ವಿಷಯಗಳನ್ನು ಧಾರ್ಮಿಕ ವೇದಿಕೆಗಳಲ್ಲಿ ತರಲೇಬಾರದು. ಇಂದಿನ ರಾಜಕೀಯವನ್ನು ಅಭಿನಂದಿಸಬೇಕು. ಹಾಗೆಯೇ ಹಿಂದಿನದನ್ನು ಸಹ, ರಾಜಕೀಯದವರು ತಮ್ಮ ಅಧಿಕಾರ ಲಾಲಸೆಗಾಗಿ ಸಮಾಜದ ಎಲ್ಲಾ ರಂಗದಲ್ಲಿ ಪ್ರಭಾವ ಬೀರಲು ಯತ್ನಿಸುತ್ತಾರೆ. ಅದರಲ್ಲೂ ಧಾರ್ಮಿಕ ಸಂಸ್ಥೆಯಲ್ಲೂ ಸಹ ಪ್ರಭಾವ ಬೀರುತ್ತಾರೆ. ರಾಜಕೀಯದಲ್ಲಿ ಎಲ್ಲಾ ನಡೆಗಳು, ರೀತಿಗಳು ಸಮ್ಮತವೇ? ಆದರೆ ಧರ್ಮವು ಮಾತ್ರ ರಾಜಕೀಯ ಮತ್ತು ರಾಜನೀತಿಜ್ಞತೆಯ ಜೊತೆಯಲ್ಲಿ ಇರಲು ನಾಚಬೇಕು (ಅಂದರೆ ಅದರಲ್ಲಿ ಬೀಳಬಾರದು). ಧಾರ್ಮಿಕ ವೇದಿಕೆಯು ಧರ್ಮಾಸಕ್ತರ ಪರಮಾರ್ಥ ಪೂರೈಕೆಗಾಗಿ ವೇದಿಕೆಯಾಗಬೇಕು. ಅಂತಹವರಲ್ಲಿ

ರಾಜಕೀಯದವರು ಇದ್ದರು ಅವರು ಧರ್ಮಾಸಕ್ತರು ಎನಿಸಿಕೊಳ್ಳುತ್ತಾರೆ. ಆದರೆ ಅಂತಹುದರಲ್ಲಿಯು ರಾಜಕೀಯದವರು ಧಾರ್ಮಿಕ ಶಾಂತಿ ಮತ್ತು ಪ್ರಶಾಂತತೆಯನ್ನು ಮುರಿಯಲು ಯತ್ನಿಸುತ್ತಾರೆ. ಅಂಥಹುದಕ್ಕೆ ಅವಕಾಶ ಮಾಡಬಾರದು. ಧಮ್ಮವು ಸರ್ವರನ್ನು ಅಪ್ಪುವಂತಹುದು. ಅದರಿಂದಾಗಿ ಯಾವುದೇ ಜನಾಂಗೀಯದವರಲ್ಲಿ ಭೇದವಿರಬಾರದು.

ಪ್ರತಿಯೊಬ್ಬರು ಮತ್ತು ಎಲ್ಲರೂ ತಮ್ಮ ಧರ್ಮಗಳನ್ನು ಎತ್ತಿಹಿಡಿಯುವಾಗ, ಗೌರವಿಸುವಾಗ ಯಾವುದೇ ಸನ್ನಿವೇಶವಿರಲಿ ಪರಧರ್ಮೀಯರ ಬೋಧನೆಗಳನ್ನು ಕೀಳಾಗಿ ಕಾಣಬಾರದು ಅಥವಾ ಅವಹೇಳನ ಮಾಡಬಾರದು. ನಾವು ಎಲ್ಲಾ ಧರ್ಮದವರ ಮೂಲತತ್ವಗಳನ್ನು ಸಂಕ್ಷಿಪ್ತವಾಗಿಯಾದರೂ ಅಭ್ಯಸಿಸಬೇಕು. ಎಲ್ಲದರಲ್ಲಿಯು ಒಳಿತನ್ನು ಸರ್ವ ಸಾಧಾರಣ ಅಂಶವನ್ನು ತೆಗೆದುಕೊಳ್ಳಬೇಕು ಮತ್ತು ವಿವಾದಾತ್ಮಕ ಅಥವಾ ಕೆಡಕನ್ನು ಕಂಡರೆ ಅವನ್ನು ತ್ಯಜಿಸಬೇಕು. ಸಂಕ್ಷಪ್ತವಾಗಿ ಹೇಳುವುದಾದರೆ **ನಿಮ್ಮ ಧಮ್ಮವನ್ನು ಎತ್ತಿಹಿಡಿಯಿರಿ. ಹಾಗೆಯೇ ಪರರ ನಂಬಿಕೆಗಳನ್ನು ಗೌರವಿಸಿ.** ಇದು ಖಂಡಿತವಾಗಿಯೂ ಬಹು ಧಾರ್ಮಿಕ ಸಮಾಜದ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುತ್ತದೆ.



# ಪರಧರ್ಮಗಳ ಬಗ್ಗೆ ಬೌದ್ಧರ ಸೌಹಾರ್ದ ಮನೋಭಾವ

ಈ ಲೇಖನದ ಉದ್ದೇಶವೇನೆಂದರೆ ಧರ್ಮದ ಉತ್ತಮ ತಿಳುವಳಿಕೆಗೆ, ಧಾರ್ಮಿಕ ಸಹಿಷ್ಣುತೆಗೆ ಮತ್ತು ಬೌದ್ಧರ ದೃಷ್ಟಿಕೋನದಿಂದ ವಿಶಾಲ ಅರ್ಥದಲ್ಲಿ ಅರಿಯುವಿಕೆ ಹಾಗು ಬೌದ್ಧರು ಹೇಗೆ ಪರಧರ್ಮೀಯರನ್ನು ಕಾಣುತ್ತಾರೆ ಎಂಬುದು ತಿಳಿದುಕೊಳ್ಳಬಹುದು.

ಧರ್ಮದ ಆಳ ಅರ್ಥದ ವಿವರಣೆ ಎಂದರೆ ಸ್ವಧರ್ಮದ ಎತ್ತಿಹಿಡಿಯುವಿಕೆ ಹಾಗು ಪರಧರ್ಮವನ್ನು ಯಾವುದೇ ರೀತಿಯಲ್ಲಿ ಅಸೌಜನ್ಯ ಅಥವಾ ಅಪಮಾನ ಮಾಡದಿರುವಿಕೆ. ಈ ರೀತಿಯಾಗಿ ನಾವು ಪರಸ್ಪರ ಅರ್ಥೈಸುವಿಕೆ, ಪರಸ್ಪರ ಸಹಕಾರ ಮತ್ತು ಸರ್ವ ಸಹ ಧರ್ಮೀಯರೊಂದಿಗೆ ತಾಳ್ಮೆಯಿಂದಿರುವಿಕೆ. ಈ ರೀತಿಯಲ್ಲೇ ಧಾರ್ಮಿಕ ಸಹಿಷ್ಣುತೆ ಸಾಧಿಸುವಿಕೆ ಮಾಡಬೇಕು.

ಜನರು ಯಾವಾಗಲು ಧಾರ್ಮಿಕ ತಾಳ್ಮೆ ಮತ್ತು ಅದರ ಪ್ರಾಮುಖ್ಯತೆಯ ಬಗ್ಗೆ ಮಾತನಾಡುತ್ತಾರೆ. ಆದರೆ ಕೆಲವರು ಮಾತ್ರ ಪ್ರಾಯೋಗಿಕ ಹಾದಿಯಲ್ಲಿದ್ದು ಧಾರ್ಮಿಕ ಸಹಿಷ್ಣುತೆಯನ್ನು ಸಾಧಿಸುತ್ತಾರೆ. ಈ ಲೇಖನವನ್ನು ಓದುಗರು ಸರಿಯಾದ ಧಾರ್ಮಿಕ ಸಹಿಷ್ಣುತೆಯ ಸ್ಪಷ್ಟ ಚಿತ್ರೀಕರಣ ಪಡೆದು ನಿಜವಾದ ಧಾರ್ಮಿಕ ಸಹಿಷ್ಣುಗಳಾಗುತ್ತಾರೆ ಎಂಬ ನಂಬಿಕೆಯಿಂದ ರಚಿಸಲಾಗಿದೆ. ನಾವು ನಮ್ಮ ಶ್ರೇಷ್ಠತ್ವ ಭಾವವನ್ನು ತೆಗೆಯಲು ಪ್ರಯತ್ನಿಸಬೇಕು. ನಮ್ಮ ಅನನ್ಯ ಸಂಶಯ, ನಮ್ಮ ಧಾರ್ಮಿಕ ಪೂರ್ವಗ್ರ ಪೀಡಿತತೆ ಮತ್ತು ನಮ್ಮ ಸ್ವಾರ್ಥ ಚಾಲಿತ ಶಕ್ತಿ, ಇವೆಲ್ಲವನ್ನೂ ನಾವು ಮೀರಬೇಕು. ಆದುದರಿಂದ ಧಮ್ಮಜ್ಞಾನವು ಧರ್ಮ ಸಹಿಷ್ಣುತೆಗಿಂತ ಶ್ರೇಷ್ಠವಾದುದು.

ಆದ್ದರಿಂದ ಧಾರ್ಮಿಕ ತಿಳುವಳಿಕೆಯು ಧಾರ್ಮಿಕ ಸಹಿಷ್ಣತೆಗಿಂತ ಮಿಗಿಲಾದುದು. ಎಲ್ಲಾ ಸಹ ಧಾರ್ಮಿಕರು ಮಾನವನ ವಿಮೋಚನೆ ಮತ್ತು ಜ್ಞಾನೋದಯದ ಸಾಧಾರಣ ಕಾರಣಕ್ಕಾಗಿ ಕಾರ್ಯ ಮಾಡುತ್ತಿದ್ದಾರೆ. ಆದರೆ ಸಂಬೋಧಿಯ ಮತ್ತು ನಿಬ್ಬಾಣದ ಸಂಶೋಧನೆಯು ಸತ್ಯದ ಸಂಶೋಧನೆ ಆಗಿದೆ. ದುರಾದೃಷ್ಟಕರ ಸಂಗತಿ ಏನೆಂದರೆ ಬಹಳಷ್ಟು ಧಾರ್ಮಿಕ ಆಚರಣೆಗಳು ಸತ್ಯವೆಂದು ತೋರಿಸಲ್ಪಡುತ್ತಿವೆ. ಆದರೆ ಅವುಗಳು ಸತ್ಯದಿಂದ ಬಹಳಷ್ಟು ದೂರವಿದೆ. ಆದರೆ ಸತ್ಯದ ಧಮ್ಮದ ಅನುಯಾಯಿಗಳಾದ ನಾವು ಸಾಕಷ್ಟು ಧೈರ್ಯ, ಸಹನೆ, ನಂಬಿಕೆಯಿಡಬೇಕಾಗಿದೆ. ಯಾವುದು ಮಿಥ್ಯಾ ದೃಷ್ಟಿ, ಮೂಢನಂಬಿಕೆಗಳಿಂದ ಕೂಡಿದುದಾಗಿದೆಯೋ ಅವುಗಳ ಸ್ವರೂಪವನ್ನು, ಸತ್ಯವನ್ನು ಅದು ಹೇಗಿದೆಯೋ ಹಾಗೆಯೇ ವಿವರಿಸಲು ಸಾಕಷ್ಟು ವಿಚಾರಶೀಲತೆಬೇಕಾಗಿದೆ. ನಾವು ನಮ್ಮ ಕರ್ತವ್ಯದಿಂದ ಬೀಳುತ್ತಿದ್ದೇವೆ. ಏಕೆಂದರೆ ನಾವು ಯಾವುದು ಸತ್ಯವಲ್ಲ ಎಂದು ನಮಗೆ ಮನವರಿಕೆ ಆಗಿಯೂ ಸಹಾ ನಾವು ಅವನ್ನೆಲ್ಲಾ ಮನದಲ್ಲಿ ಹಚ್ಚಿಕೊಂಡಿದ್ದೇವೆ. ಅದೇರೀತಿಯಲ್ಲಿ ನಾವು ಧಾರ್ಮಿಕ ಸಹಿಷ್ಣುತೆಯನ್ನು ಪಾಲಿಸದಿದ್ದರೆ ನಾವು ತಪ್ಪಾಗುತ್ತೇವೆ. (ತಪ್ಪನ್ನು ತ್ಯಜಿಸದೆ ಹಾಗೆ ಇಟ್ಟುಕೊಂಡರೆ ಅದು ಅವನತಿಯ ಸಂಕೇತವಾಗುತ್ತದೆ). ಸತ್ಯದ ಸಂಶೋಧನೆಯ ಹಾದಿಯಲ್ಲಿ ನಾವು ಸ್ಪರ್ಧಾತ್ಮಕ ದೃಷ್ಟಿಕೋನ (ಮನೋಭಾವ)ವನ್ನು ಬಿಡಬೇಕು ಮತ್ತು ಧಾರ್ಮಿಕ ಸೌಹಾರ್ದತೆಗೆ ಮತ್ತು ಮನುಕುಲದ ಉದ್ಧಾರಕ್ಕಾಗಿ ಕೈಗೆ ಕೈ ಜೋಡಿಸಿ ಈ ಶ್ರೇಷ್ಠ ಗುರಿಯನ್ನು ಸಾಧಿಸಬೇಕಾಗಿದೆ.

ಬುದ್ಧರು ತಮ್ಮ ಕಾಲದಲ್ಲಿದ್ದ ಕೆಲವು ಆಚರಣೆಗಳಲ್ಲಿ ಯಾವುದೇ ಧಾರ್ಮಿಕ ಮಹತ್ವವಿಲ್ಲ ಎಂದು ಸ್ಪಷ್ಟವಾಗಿ ತಿಳುವಳಿಕೆ ಮೂಡಿಸಿ, ತೋರಿಸಿ ಕೊಟ್ಟಿದ್ದಾರೆ ಮತ್ತು ಬುದ್ಧಭಗವಾನರು ತಮ್ಮ ಅನುಯಾಯಿಗಳಿಗೆ ತಮಗೆ ಹಾಗು ತಮ್ಮ ಅನುಯಾಯಿಗಳಿಗೆ ನೀಡುವಂತಹ ಗೌರವ ಮತ್ತು ಆತಿಥ್ಯವನ್ನು ಇತರ ಧರ್ಮದ ನಾಯಕರಿಗೂ (ಬ್ರಾಹ್ಮಣ, ಜೈನ, ಇತ್ಯಾದಿ) ನೀಡಿ ಎಂದು ಬೋಧಿಸಿದ್ದಾರೆ. ಬುದ್ಧರು ತಮ್ಮ ಬೋಧನೆಯಲ್ಲಿ ಯಾರೂ



ಸಹ ಸಮಣ ಅಥವಾ ಬ್ರಾಹ್ಮಣರಿಗೆ ಯಾವುದೇ ರೀತಿಯಲ್ಲಿ ಹಿಂಸೆ ನೀಡದಿರಿ ಎಂದು ಹೇಳಿದ್ದಾರೆ. ಇಲ್ಲಿ ಸಮಣ ಮತ್ತು ಬ್ರಾಹ್ಮಣ ಎಂದರೆ ಪರಧರ್ಮೀಯರು ಎಂದರ್ಥವಾಗಿದೆ. ಹಾಗೆಯೇ ಬುದ್ಧರು ತಮ್ಮ ಬೋಧನೆಯಲ್ಲಿ ಬ್ರಾಹ್ಮಣನಿಗೆ ಅಥವಾ ಭಿಕ್ಷುವಿಗೆ ಅಥವಾ ಸಮಣನಿಗೆ ಮೋಸ ಮಾಡಿದರೆ ಅಥವಾ ಸುಳ್ಳು ಹೇಳಿದರೆ ಅದು ಆತನ ಅವನತಿಗೆ ಕಾರಣ ಎಂದು ಹೇಳಿದ್ದಾರೆ. ಈ ರೀತಿಯಾಗಿ ಬುದ್ಧರು ಸರ್ವರನ್ನೂ ಸಮಾನ ದೃಷ್ಟಿಕೋನದಿಂದ ಸಮಾನ ಮೈತ್ರಿಭಾವದಿಂದ ಕೂಡಿದ್ದರು ಎಂದು ಮತ್ತು ಅದನ್ನೇ ಬೋಧಿಸಿದ್ದರು ಎಂದು ವ್ಯಕ್ತವಾಗುತ್ತದೆ.

ಬೌದ್ಧರ ಗುರಿಯೇನೆಂದರೆ ಪ್ರತಿಯೊಬ್ಬರು ಉದಾತ್ತ ಜೀವನವನ್ನು ಆಚರಿಸುತ್ತ ಯಾರಿಗೂ ಯಾವುದೇ ರೀತಿಯಲ್ಲಿ ಹಿಂಸಿಸದೆ ಇರುವುದು. ಹಾಗು ಮಾನವತೆಯ ಸದ್ಗುಣಗಳನ್ನು ವೃದ್ಧಿಸುವುದು. ಈ ರೀತಿಯಾಗಿ ಮಾನವನ ಘನತೆ, ಸರ್ವರನ್ನು ಉದ್ಧರಿಸುವ, ಮಹಾಕರುಣೆ, ನಿಷ್ಪಕ್ಷಪಾತದ ಸಾರ್ವತ್ರಿಕ ದಯೆ ಮೈತ್ರಿ, ಪಾಪದಿಂದ ದೂರವಾಗುವಂತಹ ಮನಸ್ಸು ಮತ್ತು ಚಿತ್ತಪರಿಶುದ್ಧತೆ ಪ್ರಾಪ್ತಿಮಾಡಿ ಶಾಂತಿ ಮತ್ತು ಸುಖವನ್ನು ಗಳಿಸುವಂತಹದ್ದಾಗಿದೆ.

ಬೌದ್ಧ ಧರ್ಮವು ಎಂತಹ ಧರ್ಮ ಅಂದರೆ ಅದು ಜನರನ್ನು 'ಬಾಳು ಮತ್ತು ಬಾಳಲು ಬಿಡು' ಎಂದು ಬೋಧಿಸುತ್ತದೆ. ಇಡೀ ಜಗತ್ತಿನ ಇತಿಹಾಸದಲ್ಲಿ ಎಲ್ಲಿಯೂ, ಎಂದಿಗೂ ಧಮ್ಮದ ಹೆಸರಿನಲ್ಲಿ ಒಂದು ತೊಟ್ಟು ರಕ್ತ ಹರಿದಿಲ್ಲ. ಕವಡೆಯಷ್ಟು ಆಸ್ತಿಹಾನಿ ಆಗಿಲ್ಲ. ತಮ್ಮ ಧರ್ಮೋದ್ಧಾರಕ್ಕೆ ಯಾರಿಗೂ ಯಾವುದೇ ರೀತಿಯಲ್ಲೂ ನಷ್ಟ ಉಂಟುಮಾಡಿಲ್ಲ. ಬೌದ್ಧರು ತಮ್ಮ ಪ್ರಾಪಂಚಿಕ ಉನ್ನತಿಗಾಗಿ ಮತ್ತು ಶಾಂತಿಗಾಗಿ ಪರಧರ್ಮೀಯರನ್ನು ತಮ್ಮ ತಡೆಯೆಂದು ಭಾವಿಸಿಲ್ಲ. (ಬದಲಾಗಿ ಅವರು ತಮ್ಮ ಸಹೋದರರೆಂದು ಮೈತ್ರಿ ಪ್ರಸರಿಸುತ್ತಾರೆ).

ಬುದ್ಧರ ಸಂದೇಶವು ಒಂದು ಆಹ್ವಾನವಿದ್ದಂತೆ. ಅದೆಂದರೆ ಸರ್ವ ಸಮಾನತೆಯ ಸುಖ ಮತ್ತು ಕ್ಷೇಮಾಭಿವೃದ್ಧಿಗಾಗಿ ಸರ್ವರೂ ಕೈಜೋಡಿಸಿ

ಸಾರ್ವತ್ರಿಕ ಸೋದರತ್ವವನ್ನು ಸಾಧಿಸಿ, ಸರ್ವರ ಹಿತಕ್ಕಾಗಿ ಶ್ರಮಿಸುವುದು ಆಗಿದೆ. ಅವರು ಜನರಿಂದ ಆಯ್ಕೆಯಾಗಿರಲಿಲ್ಲ. ಅವರು ಸಹಾ ತಮ್ಮನ್ನು ಆಯ್ಕೆಯಾದವರು ಎಂದು ಭಾವಿಸಿರಲಿಲ್ಲ.

ಬುದ್ಧ ಭಗವಾನರ ಮೊದಲ ಧಮ್ಮದೂತರು ಅರಹಂತರಾಗಿದ್ದರು. ಅಂದರೆ ಪರಿಶುದ್ಧರು, ಪರಿಪೂರ್ಣರು ಮತ್ತು ಪರಮ ಪವಿತ್ರರಾಗಿದ್ದವರು. ಅವರು ತಮ್ಮ ಪರಿಶ್ರಮ, ತ್ಯಾಗ ಮತ್ತು ಮಾನಸಿಕ ಸುಶಿಕ್ಷಣದಿಂದ ಪರಿಪೂರ್ಣರಾಗಿ ಶ್ರೇಷ್ಠರಾಗಿದ್ದಂತಹವರು. ಆ ಶಿಷ್ಯರನ್ನು ಕಳುಹಿಸುವ ಮುನ್ನ ಬುದ್ಧರು ಅವರಿಗೆ ಹೀಗೆ ಹೇಳಿದ್ದರು:

**"ಹೋಗಿ,** ಓ ಭಿಕ್ಖುಗಳೇ, ಬಹುಜನ ಹಿತಕ್ಕಾಗಿ, ಬಹುಜನ ಸುಖಕ್ಕಾಗಿ ಲೋಕಾನುಕಂಪೆಯಿಂದ ಚಲಿಸಿ. ದೇವ ಮತ್ತು ಮನುಷ್ಯರ ಕಲ್ಯಾಣಕ್ಕಾಗಿ ವಿವರಿಸಿ. ಓ ಭಿಕ್ಖುಗಳೇ, ಈ ಪರಮ ಉದಾತ್ತ ಧಮ್ಮವನ್ನು (ಬೋಧನೆಯನ್ನು ಮತ್ತು ಸತ್ಯಗಳನ್ನು) ಪವಿತ್ರ ಜೀವನವನ್ನು ಪರಿಶುದ್ಧತೆಯನ್ನು ಮತ್ತು ಪರಿಪೂರ್ಣತೆಯನ್ನು ಬೋಧಿಸಿ".

ಈ ಬುದ್ಧಿವಾದದ ಪ್ರಕಾರ ಬುದ್ಧರು ಒಳಿತು ಮತ್ತು ಕೆಡಕಿನ ವ್ಯತ್ಯಾಸ ತಿಳಿಸಲು ಇಚ್ಛಿಸಿದ್ದರು. ಹಾಗೆಯೇ ಅವರು ಹೇಗೆ ಮಾನವ ಸುಖಿಯಾಗಿರಬಲ್ಲ, ಶಾಂತವಾಗಿರಬಲ್ಲ ಮತ್ತು ಋಜುತ್ವದ ಜೀವನವನ್ನು ನಡೆಸಬಲ್ಲ ಎಂದು ತಿಳಿಸಲು ಇಚ್ಛಿಸಿದ್ದರು. ಅವರು ಎಂದಿಗೂ ತಮ್ಮ ಶಿಷ್ಯರಿಗೆ ಒಂದು ಧರ್ಮದಿಂದ ಇನ್ನೊಂದು ಧರ್ಮಕ್ಕೆ ಮತಾಂತರ ಮಾಡಿ ಎಂದು ಬೋಧಿಸಿಲ್ಲ. ಅವರ ದೃಷ್ಟಿಯಲ್ಲಿ ಪರಿವರ್ತನೆ ಎಂದರೆ ಮಿಥ್ಯದಿಂದ ಸತ್ಯದೆಡೆಗೆ, ತುಚ್ಛತೆಯಿಂದ ಶ್ರೇಷ್ಠತ್ವದೆಡೆಗೆ ಮತ್ತು ಮಿಥ್ಯ ಜೀವನದಿಂದ ಸಮ್ಯಕ್ ಜೀವನದ ಹಾದಿಯೆಡೆಗೆ ಪರಿವರ್ತನೆ ಹೊಂದುವುದಾಗಿತ್ತು ಹೊರತು ಮತಾಂತರವಾಗಿರಲಿಲ್ಲ.

ಬುದ್ಧರು ಎಂದಿಗೂ ಯಾವುದೇ ಧರ್ಮವನ್ನು ಟೀಕಿಸಲಿಲ್ಲ ಅಥವಾ ಅವಹೇಳನ ಮಾಡಿರಲಿಲ್ಲ. ಬದಲಾಗಿ ಅವರು ಜನರಿಗೆ ಜ್ಞಾನೋದಯ ವನ್ನುಂಟು ಮಾಡುತ್ತಿದ್ದರು. ಅವರು ಅತಿರೇಕದ ಮಾರ್ಗಗಳಾದ



ದೇಹದಂಡನೆಯ ನಿರರ್ಥಕತೆ ಹಾಗು ಇಂದ್ರಿಯ ಭೋಗದ ತುಚ್ಛತೆ ಹಾಗು ಅನರ್ಥಕತೆಯನ್ನು ವಿವರಿಸುತ್ತಿದ್ದರು. ಹಾಗೆಯೇ ಧಮ್ಮದ ಹೆಸರಿನಲ್ಲಿದ್ದ ಮೂಢನಂಬಿಕೆ ಮತ್ತು ಅರ್ಥಹೀನ ಕ್ರಿಯೆಗಳನ್ನು ತಡೆಯಲು ಯತ್ನಿಸಿದ್ದರು.

## ನಿಜವಾದ ಧರ್ಮ

ಒಂದು ಪ್ರಶ್ನೆ : ನಿಜವಾದ ಧಮ್ಮವು ಏನನ್ನು ಒಳಗೊಂಡಿರುತ್ತದೆ?

ಇದಕ್ಕೆ ಬುದ್ಧರು ಸ್ವತಂತ್ರವಾದ ಉತ್ತರ ನೀಡಿದರು **"**ಯಾವ ಯಾವ ಬೋಧನೆಯಲ್ಲಿ ನಾವು 4 ಆರ್ಯ ಸತ್ಯಗಳನ್ನು ಮತ್ತು ಆರ್ಯ ಅಷ್ಟಾಂಗ ಮಾರ್ಗವನ್ನು ಕಾಣುತ್ತೇವೆಯೋ ಮತ್ತು ಎಲ್ಲೆಲ್ಲಿ ಪರಮಾರ್ಥದ ವಿಕಾಸ ಹೊಂದಿರುವ ಅಪ್ಪಟ ಹಿಂಬಾಲಕರು ಇದ್ದಾರೋ ಅಲ್ಲಿ ಧಮ್ಮವು ನೆಲೆಸಿರುತ್ತದೆ. ಅವರೆಂದಿಗೂ ಬುದ್ಧ ಧರ್ಮ ಮಾತ್ರ ಏಕೈಕ ನಿಜವಾದ ಧರ್ಮ ಎಂದು ಹೇಳಿಲ್ಲ. ಆದರೆ ಸತ್ಯಾನ್ವೇಷಿಯು ಎಲ್ಲೆಲ್ಲಿ ಸತ್ಯವನ್ನು ಕಾಣುತ್ತಾರೋ (ಅದು ಅಲ್ಪವೇ ಆಗಿರಲಿ) ಆತ ಅದನ್ನು ಗೌರವಿಸಬೇಕು ಮತ್ತು ಸ್ವೀಕರಿಸಬೇಕು. ಇದರ ಅರ್ಥ ಏನೆಂದರೆ, ನಾವು ಪರಧರ್ಮಗಳ ವಿಚಾರಭರಿತ, ಯೋಗ್ಯ ಬೋಧನೆಗಳನ್ನು ಅಲಕ್ಷಿಸುವಂತಿಲ್ಲ. ಇಂತಹ ದೃಷ್ಟಿಕೋನದಿಂದ ಸ್ಪಷ್ಟವಾಗಿ ತೋರಿಸುವುದು ಏನೆಂದರೆ ಬುದ್ಧರು ಎಂದಿಗೂ ಪರಧರ್ಮಗಳ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿರಲಿಲ್ಲ. ಹಾಗೆಯೇ ಅವರು ಎಂದಿಗೂ ಧಾರ್ಮಿಕ ಸತ್ಯವನ್ನು ಇದೊಂದೇ ಸತ್ಯ ಎಂದು ವಿವಾದ ಹುಟ್ಟಿಸಲಿಲ್ಲ. ಅವರು ತೋರಿಸುತ್ತಿದ್ದುದು, ಹುಡುಕುತ್ತಿದ್ದುದು ಒಂದೇ ಒಂದು ವಿಷಯವಾಗಿತ್ತು ಅದೇ ಸತ್ಯ. ಅವರ ಎಲ್ಲಾ ಬೋಧನೆಗಳು ನಾಲ್ಕು ಆರ್ಯಸತ್ಯಗಳಲ್ಲಿದೆ, ಅದೆಂದರೆ **ದುಃಖಸತ್ಯ,** ಅದರ **ಕಾರಣ,** ಅದರ **ನಿರೋಧ** ಮತ್ತು **ದುಃಖ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗ.**

ಯಾವಾಗಲೇ ಆಗಲಿ ಬುದ್ಧರು ಅವರ ಶಿಷ್ಯರಿಗೆ ಹೀಗೆ ಮಾಡಿ ಅಥವಾ ಇದರಿಂದ ದೂರವಿರಿ ಎಂದು ಬೋಧಿಸುವ ಮುನ್ನ ಶಿಷ್ಯರಿಗೆ ಅದಕ್ಕೆ ಕಾರಣ, ಅದರ ಲಾಭ, ಪರಿಣಾಮ ತಿಳಿಸುತ್ತಿದ್ದರು. ಹೀಗೆ

ಮಾಡುವುದರಿಂದ ಅಥವಾ ಇವರಿಂದ ದೂರವಿರುವುದರಿಂದ ಅವರಿಗೆ ಸುಖ ಮತ್ತು ಕ್ಷೇಮ ಲಭಿಸುತ್ತದೆ ಎಂದು ವಿವರಿಸುತ್ತಿದ್ದರು. ಅಷ್ಟೇ ಅಲ್ಲ, ಅವರಿಂದ ಪರರ ಸುಖ ಮತ್ತು ಕ್ಷೇಮವು ಸಿಗುತ್ತದೆ ಎಂದು ಹೇಳುತ್ತಿದ್ದರು. ಅವರು ಹೀಗೆ ಹೇಳುತ್ತಿದ್ದರು, "ಇದರಿಂದ ನಿಮಗೆ ಮತ್ತು ಪರರಿಗೆ ಒಳಿತಾಗುತ್ತದೆ ಎಂದು ಮನವರಿಕೆಯಾದರೆ ನೀವು ಮಾಡಿ, ಇಲ್ಲದೇ ಹೋದರೆ ನಿಮಗೆ ಮತ್ತು ಪರರಿಗೆ ಹಾನಿ ಎಂದು ಅರಿವಾದರೆ ಮಾಡದಿರಿ".

ಒಬ್ಬ ಸಮಾಜ ಸುಧಾರಕರಾಗಿ ಬುದ್ಧರು ಮಾನವನ ದುಃಖದ ಆಳವಾದ ಬೇರುಗಳನ್ನು ಕಂಡುಹಿಡಿದರು. ಅದೇ ಲೋಭ, ದ್ವೇಷ ಮತ್ತು ಮೋಹ. ಇವೇ ಮಾನವನ ಮನಸ್ಸಿನಲ್ಲಿ ಬೇರೂರಿರುವ ವಿಷಗಳು. ಆದರಿಂದ ಮಾನವನ ಮನಸ್ಸು ಸುಧಾರಿತವಾದರೆ ಮಾತ್ರ ಸುಪರಿಣಾಮಕಾರಿ ಯಾಗುತ್ತದೆ. ಬಾಹ್ಯ ಜಗತ್ತನ್ನು ಬಲತ್ಕಾರವಾಗಿ ಸುಧಾರಿಸುವುದು ತಾತ್ಕಾಲಿಕ ಪರಿಣಾಮವನ್ನುಂಟು ಮಾಡುತ್ತದೆ. ಆದರೆ ಯಾವುದನ್ನು ಮಾನವನ ಆಂತರ್ಯದ ಮನಸ್ಸಿನಲ್ಲಿ ಪರಿವರ್ತನೆ ಮಾಡಿದಾಗ ಅದು ನಿರಂತರ ಸುಪರಿಣಾಮವನ್ನುಂಟು ಮಾಡುತ್ತದೆ.

ಪಾಪ ಪ್ರವೃತ್ತಿಗಳಾದ ಲೋಭ, ದ್ವೇಷ ಮತ್ತು ಮೋಹಗಳನ್ನು ದಾನ-ವೈರಾಗ್ಯ, ಮೈತ್ರಿ-ಕರುಣೆ ಮತ್ತು ಪ್ರಜ್ಞಾ, ಇವುಗಳ ಮೂಲಕ ಶೀಘ್ರವಾಗಿ ದಾಟಬಹುದು, ಪಾರಾಗಬಹುದು. ಹಾಗೆ ಆದಾಗ ಮಾತ್ರ ಮಾನಸಿಕ ಪರಿಶುದ್ಧತೆ ಉಂಟಾಗಿ ಪ್ರಶಾಂತತೆ ಮತ್ತು ಸುಖವು ಧಮ್ಮದ ಮೂಲಕ ಪರಿಣಾಮಕಾರಿಯಾಗಿ ಲಭಿಸುತ್ತದೆ.

ಬೌದ್ಧ ಧಮ್ಮವೇ ಜಗತ್ತಿನ ಪ್ರಥಮ ಧಮ್ಮದೂತರ ಧರ್ಮವಾಗಿದೆ. ಸುಮಾರು 2300 ವರ್ಷಗಳ ಹಿಂದೆ ಭಾರತದ ಮಹಾನ್ ಸಾಮ್ರಾಟ ಚಕ್ರವರ್ತಿ ಅಶೋಕನು ಭಾರತವನ್ನು ಆಳುತ್ತಿದ್ದಾಗ (ಕ್ರಿ.ಪೂ. 305-268) ಆತನಿಗೆ ಸಾಮ್ರಾಜ್ಯ ದಾಹವುಂಟಾಗಿತ್ತು. ಆದರೆ ಬುದ್ಧ ಧಮ್ಮದ ಜ್ಞಾನವುಂಟಾಗಿ ಆತನು ಖಡ್ಗವನ್ನು ಅದರ ಮೂಲಕ ನಡೆಯುವ ಹಿಂಸೆಯನ್ನು ತ್ಯಜಿಸಿದನು. ತನ್ನ ಸಮಯವನ್ನು ಪ್ರಜಾ ಕಲ್ಯಾಣಕ್ಕಾಗಿ



ಹಾಗು ಬುದ್ಧ ಧಮ್ಮದ ಉದ್ಧಾರಕ್ಕಾಗಿ, ಅದರ ಸಂಸ್ಕೃತಿಯ ನಿರ್ಮಾಣಕ್ಕಾಗಿ ಶ್ರಮಿಸಿದನು. ಆತನು ಇದೇರೀತಿಯ ಶ್ರೇಷ್ಠ ಸುಖ ಜಗತ್ತಿನಲ್ಲಿ ನೆಲೆಸಿದ್ದ ಎಲ್ಲರಿಗೂ ಸಿಗಲಿ ಎಂಬ ಆಶಯದಿಂದ ಬೌದ್ಧ ಧಮ್ಮದೂತರನ್ನು ವಿಶ್ವದ ಎಲ್ಲಾ ದೇಶಗಳಿಗೂ ಕಳುಹಿಸಿದನು. ಮಹತ್ ಕಾರ್ಯಕ್ಕೆ ತನ್ನ ಪುತ್ರ ಮತ್ತು ಪುತ್ರಿಯನ್ನು ಸಂಘಕ್ಕೆ ಸಮರ್ಪಿಸಿದನು. ಬುದ್ಧರ ಶಾಂತಿ ಸಂದೇಶವನ್ನು ಎಲ್ಲೆಡೆ ಸ್ಥಾಪಿಸಿದನು. ಬುದ್ಧರ ಪರಮಶ್ರೇಷ್ಠ ಸಂಪ್ರದಾಯಕ್ಕೆ ನಿಜವಾದ ಸೇವೆ ಸಲ್ಲಿಸುವುದಕ್ಕಾಗಿ ಎಂದಿಗೂ ಪರಧಮ್ಮವನ್ನು ನಿಂದಿಸಬಾರದೆಂದು ಬುದ್ಧಿವಾದವನ್ನು ನುಡಿದು ಸಭ್ಯ ಶ್ರೇಷ್ಠ ರೀತಿಯಲ್ಲಿ ಬುದ್ಧ ಧಮ್ಮವನ್ನು ಹರಡಿಸಿದನು. ಈ ಬುದ್ಧಿವಾದವನ್ನು ನಾವು ಇಂದಿಗೂ ಭಾರತದ ಸಾರಾನಾಥದ ಅಶೋಕ ಸ್ತಂಭದಲ್ಲಿ ಬ್ರಾಹ್ಮಿಲಿಪಿಯಲ್ಲಿ ಇಂದಿಗೂ ಕಾಣಬಹುದು.

ಈ ಮುಂದಿನ ವಾಕ್ಯಗಳು ಆ ಶಿಲಾಶಾಸನದಲ್ಲಿದೆ : "ಒಬ್ಬನು ಕೇವಲ ತನ್ನ ಧರ್ಮವನ್ನೇ ಗೌರವಿಸಬಾರದು ಮತ್ತು ಪರಧರ್ಮವನ್ನು ಹೀಯಾಳಿಸಬಾರದು (ನಿಂದಿಸಬಾರದು). ಬದಲಾಗಿ ಒಬ್ಬನು ಈ ಅಥವಾ ಆ ಕಾರಣದಿಂದಲಾದರೂ ಪರಧರ್ಮವನ್ನು ಗೌರವಿಸಬೇಕು. ಹೀಗೆ ಮಾಡಿದಾಗ ಮಾತ್ರ ಒಬ್ಬನು ತನ್ನ ಧಮ್ಮವನ್ನು ಗೌರವಿಸುತ್ತಾನೆ. ಹಾಗು ತನ್ನ ಧಮ್ಮವನ್ನು ವೃದ್ಧಿಸುತ್ತಾನೆ. ಹಾಗೆಯೇ ಪರಧರ್ಮಕ್ಕೂ ತಕ್ಕಸೇವೆ ಸಲ್ಲಿಸುತ್ತಾನೆ. ಇದರ ಹೊರತು ಬೇರೆರೀತಿ ವರ್ತಿಸಿದರೆ ಆತನು ತನ್ನ ಧಮ್ಮಕ್ಕೆ ಅಗೆದು ಗೋರಿ ಕಟ್ಟುತ್ತಾನೆ ಮತ್ತು ಪರಧರ್ಮಕ್ಕೆ ಹಾನಿ ಉಂಟು ಮಾಡುತ್ತಾನೆ. ಯಾರಾದರೂ ಕೇವಲ ಸ್ವಧರ್ಮಕ್ಕೆ ಗೌರವಿಸಿ, ಪರಧಮ್ಮವನ್ನು ನಿಂದಿಸುತ್ತಾನೋ, ಆತನು ಮಾಡುವಾಗ ಇದನ್ನು ಅಂಧಭಕ್ತಿಯಿಂದ ಹೀಗೆ ಯೋಚಿಸಬಹುದು. "ನಾನು ನನ್ನ ಧರ್ಮವನ್ನು ಹೆಮ್ಮೆಪಡುವಂತೆ ಉದ್ಧರಿಸುತ್ತಿರುವೆನು". ಆದರೆ ಪ್ರತಿಯಾಗಿ ಆತನು ಹೀಗೆ ಮಾಡುವಾಗ ತನ್ನ ಧರ್ಮಕ್ಕೆ ಮಾರಾಣಾಂತಿಕವಾಗಿ ಗಾಯಗೊಳಿಸುತ್ತಿರುವನು. ಆದ್ದರಿಂದ ಸೌಹಾರ್ದತೆಯೇ ಉತ್ತಮ". "ಎಲ್ಲರೂ ಸರ್ವರ ಬೋಧನೆಗಳನ್ನು ಕೇಳಲಿ ಮತ್ತು ಕೇಳಲು ಇಚ್ಛುಕರಾಗಲಿ".

ಏಷಿಯಾದ ಸರ್ವಜನರು ಸಾಮ್ರಾಟ ಅಶೋಕನಿಗೆ ಅಭಾರಿಯಾಗಿರ ಬೇಕು. ಒಬ್ಬ ಆಳ್ವಿಕೆಗಾರನಾಗಿ ಆತನು ಪ್ರಚಲಿತದಲ್ಲಿದ್ದ ಸರ್ವ ಧರ್ಮಗಳನ್ನು ಪಕ್ಷಪಾತವಿಲ್ಲದೆ ಸಲುಹುತ್ತಿದ್ದನು.

## ಧಾರ್ಮಿಕ ಸೌಹಾರ್ದತೆ

ಧಾರ್ಮಿಕ ತತ್ವಗಳು ಇಡೀ ಮಾನವತೆಗಾಗಿ ಇದೆ. ಒಂದುವೇಳೆ ಮಾನವತೆಯ ನಿರ್ಧಿಷ್ಟ ಭಾಗವು ಧಮ್ಮದ ಶ್ರೇಷ್ಠ ಸದ್ಗುಣಗಳಾದ ಕರುಣೆ, ಸಹನೆ, ಕ್ಷಮೆ ಮತ್ತು ಪ್ರಜ್ಞಾಶೀಲತೆ ಇವುಗಳಲ್ಲಿ ಯಾವುದಾದರು ಒಂದನ್ನು ಪಾಲಿಸದಿದ್ದರೆ ಪರರು ಶಾಂತಿಯಿಂದ ಜೀವಿಸಲಾರರು.

ವಂಚಕರಿಗೆ ಹಾಗು ಸ್ವಾರ್ಥಿಗಳಿಗೆ ಪರರಲ್ಲಿನ ಯಾವುದೇ ಶೀಲದ ದುರ್ಲಾಭ ಗಳಿಸುವುದು ಸ್ವಾಭಾವಿಕವೇ ಸರಿ. ಆದರೆ ಇಂದಿನ ಎಲ್ಲಾ ಧರ್ಮದವರೇ ನೆನಪಿನಲ್ಲಿಡಿ. ಯಾರು ಧರ್ಮದ ಹೆಸರಿನಲ್ಲಿ ರಕ್ತ ಹರಿಸುವರೋ ಹಾಗು ಹೋರಾಡುವರೋ, ಅವರು ಎಂದಿಗೂ ಧಮ್ಮದ ತತ್ವಗಳನ್ನು ಪಾಲಿಸಿಲ್ಲ ಹಾಗು ಮಾನವತೆಗೆ ಕಾರಣವಾದುದಕ್ಕೆ ಸೇವೆ ಸಲ್ಲಿಸಿಲ್ಲ. ಅವರು ಕೇವಲ ತಮ್ಮ ವೈಯಕ್ತಿಕ ಲಾಭಕ್ಕಾಗಿ ಅಥವಾ ಅಧಿಕಾರಕ್ಕಾಗಿ ಹೋರಾಡುತ್ತಾ ಧಮ್ಮದ ಹೆಸರು ಅಂಟಿಸಿರುತ್ತಾರೆ. ಯಾರು ನಿಜವಾಗಿ ಧರ್ಮವನ್ನು ಪಾಲಿಸುತ್ತಿರುವರೋ, ಅವರು ಹೋರಾಡಲು, ಯುದ್ಧ ಮಾಡಲು, ಯಾವುದೇ ನೆಲೆ ಬೇಕಿಲ್ಲ. ಅವರು ಶಾಂತಿಯುತ, ಸೌಜನ್ಯಯುತ ಹಾದಿಯಲ್ಲೇ ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಾರೆ. ಒಂದು ನಿಜವಾದ ಧಮ್ಮ ಎಂದಿಗೂ, ಎಂತಹ ಸನ್ನಿವೇಶಕ್ಕು ಯಾವುದೇ ಪ್ರಕಾರದ ಹಿಂಸೆಗೆ ಪ್ರೋತ್ಸಾಹಿಸುವುದಿಲ್ಲ. ಅದೇ ವೇಳೆಯಲ್ಲಿ ನಾವು ಗೌರವಯುತ ಧಮ್ಮವನ್ನು ಪಾಲಿಸುವಾಗ ಜನಾಂಗಿಯ ಬೇದಭಾವ ಉಂಟಾಗುವುದಿಲ್ಲ. ಬೌದ್ಧರು ಪರಧರ್ಮೀಯ ರೊಂದಿಗೆ ದ್ವೇಷವಿಲ್ಲದೆ ಕೆಲಸ ಕಾರ್ಯವು ಮಾಡಬಹುದು ಹಾಗು ಜೀವಿಸಲೂಬಹುದು. ಅದಕ್ಕೆ ಯಾವ ಅಭ್ಯಂತರವೂ ಇಲ್ಲ. ಅಷ್ಟೇ ಇಲ್ಲ, ಬೌದ್ಧರು ಧಮ್ಮಕ್ಕಾಗಿ ಎಂದಿಗೂ



ಪರಧರ್ಮೀಯರೊಂದಿಗೆ ಅಥವಾ ಸ್ವಧರ್ಮೀಯರೊಂದಿಗೆ ರಕ್ತಪಾತವನ್ನು ಉಂಟುಮಾಡುವುದಿಲ್ಲ (ರಕ್ತ ಚೆಲ್ಲುವುದಿಲ್ಲ).

ಇಂದಿನವರೆಗೆ ಮತ್ತು ಇಂದಿಗೂ ಸಹಾ ಧರ್ಮದ ಹೆಸರಿನಲ್ಲಿ ಬರ್ಬರ ಕೃತ್ಯಗಳು ಹಿಂಸಾಪಾತಗಳು ನಡೆದಿವೆ ಮತ್ತು ನಡೆಯುತ್ತಿವೆ. ಬಹಳಷ್ಟು ಮಂದಿಗೆ 'ಧರ್ಮ' ಎಂಬ ಹೆಸರೇ ದಿಗ್ಭ್ರಾಂತಿ ಉಂಟುಮಾಡಿದೆ. ಇಡೀ ಮಾನವತೆಯ ಇತಿಹಾಸದಲ್ಲಿ 'ಧರ್ಮ' ಹೆಸರಿನ ಸೋಗಿನಲ್ಲಿ ಭೌತಿಕವಾದ, ಕಪಟ, ವಂಚನೆ, ಮತಾಂಧತೆ ಮತ್ತು ಸಾಮೂಹಿಕ ಹತ್ಯೆಗಳು ನಡೆದಿವೆ. ನಿಜವಾದ ಧರ್ಮದ ಮೌಲ್ಯಗಳು ಕ್ಷಿಪ್ರವಾಗಿ ಜನರ ಮನಸ್ಸಿನಿಂದ ಮರೆಯಾಗುತ್ತಿದೆ ಮತ್ತು ಅವರು ಕೇವಲ ನಿಗೂಢತೆ ಮತ್ತು ವಾಮಾಚಾರ ವಿದ್ಯೆಗಳ ಶೋಧನೆಗೆ ಓಡುತ್ತಿದ್ದಾರೆ. ಸ್ಥಾಪಿತ ಶ್ರೇಷ್ಠ ಧರ್ಮಗಳು ಹಲವಾರು ರೂಪಗಳಲ್ಲಿ ತುಂಡು ತುಂಡಾಗುತ್ತಾ ಹೋಗುತ್ತಿವೆ ಮತ್ತು ಬಹಳಷ್ಟು ಜನರು ಧರ್ಮವನ್ನು ವ್ಯಂಗ್ಯ ಮಾಡಲು ಹೊರಟಿದ್ದಾರೆ. ಈಗ ಎಲ್ಲಾ ಧಮ್ಮದವರು ಒಗ್ಗೂಡಿ ಧಾರ್ಮಿಕ ನಿಜಧಮ್ಮದ ತತ್ವಗಳನ್ನು ಎತ್ತಿಹಿಡಿಯುವ ಕಾಲ ಒದಗಿ ಬಂದಿದೆ. ಕೇವಲ ನಂಬಿಕೆ ಮತ್ತು ಪುರಾಣಗಳ ಬಗ್ಗೆ ಚರ್ಚಿಸುವ ಜಗಳವಾಡುವ ಕಾಲ ದೂರ ಹೋಗುತ್ತಿದೆ.

ಧರ್ಮವೆಂದರೆ ಕೇವಲ ಪ್ರಾರ್ಥಿಸುವುದಲ್ಲ ಅಥವಾ ಪೂಜೆ ಮಾಡುವುದಲ್ಲ. ಧರ್ಮವು ಕೇವಲ ನಾಲಿಕೆಯ ಕಾರ್ಯವಲ್ಲ. ಬದಲಾಗಿ ಮಾನವತೆಯ ಸೇವೆಗಾಗಿ ಮಾನವನು ಅಹಿಂಸೆಯುತವಾಗಿ ವರ್ತಿಸುವುದಾಗಿದೆ. ಒಳಿತನ್ನು ಮಾಡುವುದಾಗಿದೆ ಶಾಂತಿ, ನಿಜವಾದ ಸುಖ ಮತ್ತು ವಿಮುಕ್ತತೆಯನ್ನು ಗಳಿಸುವಂತಹದ್ದಾಗಿದೆ.

ವಿಭಿನ್ನ ಧರ್ಮದವರು ಜೀವನದ ಪ್ರಾರಂಭ ಮತ್ತು ಅಂತ್ಯದ ಬಗ್ಗೆ ವಿಭಿನ್ನ ನಂಬಿಕೆಗಳನ್ನು ಮತ್ತು ದೃಷ್ಟಿಕೋನಗಳನ್ನು ಹೊಂದಿದ್ದಾರೆ. ಹಾಗೆಯೇ ಅಂತಿಮ ಬಿಡುಗಡೆಗೆ ವಿಧವಿಧದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ. ಆದರೆ ಅಂತಹ ಐಕ್ಯಮತ್ಯವಲ್ಲದ ವಿಷಯಗಳನ್ನು ನಾವು ಮುಂದೆ ತರಬಾರದು. ಏಕೆಂದರೆ ಅದರಿಂದ ತಿಕ್ಕಾಟ, ದ್ವೇಷ, ಹಿಂಸೆ, ಸೇಡು ಮತ್ತು ತಪ್ಪು ತಿಳುವಳಿಕೆಗಳಾಗುತ್ತವೆ.

ಧಮ್ಮದ ಹೆಸರಿನಲ್ಲಿ ಸಾಮಾನ್ಯ ಸದ್ಗುಣಗಳು ಎಷ್ಟೋ ಇವೆ. ಅವನ್ನು ನಾವು ಸಿದ್ಧಾಂತ ಮತ್ತು ಸಾಧನೆಯಾಗಿ ಪರಿಚಯಿಸಬಹುದು, ಅದರಿಂದಾಗಿ ಜನರು ಸತ್ಯಸಂಧರಾಗಿ, ಶಾಂತತೆಯಿಂದ, ಸಂಸ್ಕೃತರಾಗಿ ಜೀವಿಸಬಹುದು.

ನಾವು ಮತ್ತೊಬ್ಬರನ್ನು ಬೇರ್ಪಡಿಸುವುದು ಮತ್ತು ದೂರ ಮಾಡುವುದು ಬೇಕಾಗಿಯೇ ಇಲ್ಲ. ನಾವು ಹಾಗೆ ಮಾಡತೊಡಗಿದರೆ ಅಧಾರ್ಮಿಕರು ಅವಕಾಶಕ್ಕೆ ಕಾದು ಎಲ್ಲಾ ಧರ್ಮಗಳನ್ನು ವ್ಯಂಗ್ಯ ಮಾಡುತ್ತಾರೆ ಮತ್ತು ನಿಂದಿಸುತ್ತಾರೆ. ನಾವು ನಮ್ಮ ಸಹ ಧಾರ್ಮಿಕರೊಂದಿಗೆ ಆ ರೀತಿಯ ವರ್ತನೆ ಮಾಡಬಾರದು. ಈ ರೀತಿಯಲ್ಲಿ ನಾವು ದ್ವೇಷಿಸಿದರೆ ಜನರು ಧರ್ಮವೆಂದರೆ ಮಾನವತೆಯನ್ನು ಬೇರ್ಪಡಿಸುವುದು ಎಂದರ್ಥ ಎಂದು ಹೇಳುತ್ತಾರೆ.

ಬೌದ್ಧರು ಪರಧರ್ಮಿಯ ಗುರುಗಳಿಗೆ ಗೌರವಿಸುವುದನ್ನು ನಿಷೇಧಿಸಲಾಗಿಲ್ಲ ಅಥವಾ ಪರಧರ್ಮಿಯ ಪೂಜಾ ಸ್ಥಳಗಳಿಗೆ ಭೇಟಿ ನೀಡುವುದನ್ನು ನಿರ್ಬಂಧಿಸಿಲ್ಲ. ಅವರು ಹಾಗೆ ಮಾಡುವಾಗ ತಮ್ಮ ಸಹಕಾರವನ್ನು ತೋರಿಸುತ್ತಾರೆ. ಆದರೆ ಹಾಗೆಯೇ ಬೌದ್ಧ ತತ್ವಗಳನ್ನು ಅನುಸರಿಸುತ್ತಿರುತ್ತಾರೆ.

ಬೌದ್ಧ ಧಮ್ಮದಲ್ಲಿ ವಿವಿಧ ಧಾರ್ಮಿಕ ವಿಭಾಗಗಳನ್ನು ಅರಿಯುವಿಕೆಯಲ್ಲಿ ಮತ್ತು ಸಹಕಾರ ನೀಡುವಿಕೆಯಲ್ಲಿ ಪ್ರೋತ್ಸಾಹವಿದೆ. ಬೌದ್ಧರ ಪ್ರಕಾರ ಧಾರ್ಮಿಕ ಚಿಹ್ನೆಗಳು ಪರರು ಭಾವಿಸುವಂತೆ ಅದೇ ಧರ್ಮವಲ್ಲ, ಬದಲಾಗಿ ಗೌರವಯುತ ಮತ್ತು ಅಹಿಂಸಯುತ ಜೀವನವನ್ನು ಜೀವಿಸುವುದೇ ಧಾರ್ಮಿಕ ಜೀವನವಾಗಿದೆ.

ಯಾರಾದರೂ ಬೌದ್ಧ ಧರ್ಮದಲ್ಲಿ ಹುಳುಕುಗಳನ್ನು ಹಿಡಿದು, ಹುರುಳಿಲ್ಲದ ಟೀಕೆಯನ್ನು ಚೆನ್ನಾಗಿ ಮಾಡಬಹುದು. ಅದರ ಸಂಪ್ರದಾಯಿಕ ಪದ್ಧತಿಗಳನ್ನು ಟೀಕಿಸಬಹುದು. ಅವುಗಳ ರೀತಿ, ವಿಧಿಗಳನ್ನು ಟೀಕಿಸಬಹುದು. ಆದರೆ ಬುದ್ಧರ ಬೋಧನೆಗಳನ್ನು ಟೀಕಿಸಲಾಗುವುದಿಲ್ಲ. ಏಕೆಂದರೆ ಅವು ಸಾರ್ವಕಾಲಿಕ ಸತ್ಯಗಳಾಗಿವೆ. ಸಾರ್ವಕಾಲಿಕ ಒಳಿತನ್ನುಂಟು



ಮಾಡುವಂತಹದ್ದಾಗಿದೆ. ಅವುಗಳನ್ನು ಯಾರೊಬ್ಬರು ಪ್ರಯತ್ನಿಸಿ ಪರೀಕ್ಷಿಸುವಂತಹದ್ದಾಗಿದೆ.

ಬುದ್ಧರ ಬೋಧನೆಗಳನ್ನು ಪರಿಚಯಿಸಿದ ವಿಧಾನಗಳು ಶಾಂತಿಯುತ ಮತ್ತು ವಿಚಾರಯೋಗ್ಯವಾಗಿವೆ. ಬುದ್ಧರು ಸಹ ವಿಮರ್ಶೆ ಮತ್ತು ಅನುಭವದಿಂದ ಸತ್ಯ ಪರೀಕ್ಷಿಸಿ ಎಂದು ತಿಳಿಸಿದ್ದಾರೆ. ಆ ಬೋಧನೆಗಳು ಸ್ಪಷ್ಟ ಹಾಗು ಸರಳಾಕರ್ಷಿತವಾಗಿವೆ. ಹಾಗಿದ್ದು ಸಹ ಧರ್ಮ, ರಾಷ್ಟ್ರ ಹಾಗು ಮತಾಂಧತೆ ಇವುಗಳಂತಹ ಸಂಕುಚಿತತೆಯಿಂದ ಮುಕ್ತವಾಗಿದೆ. ಈ ಬೋಧನೆಯಿಂದ ಸ್ಪಷ್ಟ ಹಾಗು ಪ್ರಜ್ಞಾಶೀಲರು ಉತ್ಪತ್ತಿಯಾಗುತ್ತಾರೆ. ಆ ಬೋಧನಾ ಶೈಲಿಯಿಂದ ಸಂದೇಹಗಳು ಮತ್ತು ಮೂಢನಂಬಿಕೆಗಳು ದೂರವಾಗುತ್ತವೆ. ಹೀಗಿರುವುದರಿಂದಲೇ ಬುದ್ಧತತ್ತ್ವಗಳು ಸದಾ ಸತ್ಯ ಸಂಶೋಧಕನ ಹೃದಯ ಹಾಗು ಮನಸ್ಸಿಗೆ ಆನಂದ ನೀಡುವುದು. ಬೌದ್ಧರ ಸಹನಾ ಮನೋಭಾವ ಮತ್ತು ಪ್ರಜ್ಞಾಶೀಲತೆಗಳು ಬಹಳಷ್ಟು ಶ್ರೇಷ್ಠ ಚಿಂತಕರಿಗೆ, ತತ್ವಜ್ಞಾನಿಗಳಿಗೆ, ವಿಚಾರಪರರಿಗೆ, ಮುಕ್ತ ಚಿಂತಕರಿಗೆ ಆಜ್ಞೇಯವಾದಿಗಳಿಗೆ ಹಾಗು ನಾಸ್ತಿಕರು ಸಹ ಬುದ್ಧ ಧಮ್ಮವನ್ನು "ಶಾಂತಿಯುತ ಹಾಗು ಆನಂದದಾಯಕ ಜೀವನ ಮಾರ್ಗ" ಎಂದಿದ್ದಾರೆ.

ಬುದ್ಧರ ಪ್ರಕಾರ ಪುರುಷರು ತಮ್ಮ ಸ್ವಕೇಂದ್ರೀಕೃತ ಮನೋಭಾವದಿಂದ ಪ್ರತ್ಯೇಕರಾಗಿರುವರು. ಯಾವಾಗ ಇದು ದಮನವಾಗುತ್ತದೋ, ಆರೋಗ್ಯಕರ ಮಾನವತಾ ಬಾಂಧವ್ಯಗಳು ವೃದ್ಧಿಯಾಗುತ್ತವೆ. ಆದ್ದರಿಂದ ಶಾಂತಿಯ ಮತ್ತು ಸೌಹಾರ್ದಯುತ ಜೀವನ ವಿಧಾನವು ಆಂತರ್ಯದಿಂದ ಪ್ರಾರಂಭವಾಗುತ್ತದೆಯೇ ಹೊರತು ಬಾಹ್ಯದಿಂದಲ್ಲ.

ಇಂದಿನ ಧರ್ಮವಾದಿಗಳು ಸೌಹಾರ್ದತೆಯಿಂದ ಒಟ್ಟುಗೂಡಿ ಕಾರ್ಯ ಮಾಡದಿದ್ದರೆ, ಪಕ್ಷಪಾತ ತೊರೆಯದಿದ್ದರೆ, ದ್ವೇಷ ತ್ಯಜಿಸದಿದ್ದರೆ, ಶಾಂತಿ ಎಂಬುದು ಕೇವಲ ಕನಸಾಗಿಯೇ ಉಳಿಯುತ್ತದೆ.

ಒಬ್ಬ ಪ್ರಮಾಣಿಕ ಮತ್ತು ಸಾತ್ವಿಕ ಸಹ ಧಾರ್ಮಿಕರಾಗಿ ನಾವೆಲ್ಲರೂ ಪರಸ್ಪರ ಕೈ ಜೋಡಿಸೋಣ. ವಿವಾದಾತ್ಮಕ ಮತ್ತು ಪಕ್ಷಪಾತ ಹೊಂದಿರುವ

ನಮ್ಮ ಬೋಧನೆಗಳನ್ನು ನಿವಾರಿಸಿಕೊಳ್ಳೋಣ. ಸರ್ವರಿಗೂ ಸಮಾನವಾಗಿರುವ ಧರ್ಮ ತತ್ವಗಳನ್ನು ಪರಿಚಯಿಸೋಣ. ಸರ್ವರ ಹಿತ ಹಾಗು ಸುಖಕ್ಕಾಗಿ, ಮಾನವತೆಗಾಗಿ ಜನಾಂಗ ಅಥವಾ ಜಾತಿಯನ್ನು ವರ್ಣವನ್ನು ಮೀರೋಣ. ನಾವೆಲ್ಲರೂ ನೆನಪಿಡಬೇಕಾದ ಸಂಗತಿ ಏನೆಂದರೆ ಧಮ್ಮ ಇರುವುದು ಮಾನವತೆಯ ಒಳಿತಿಗಾಗಿಯೇ. ಆದ್ದರಿಂದ ಅದನ್ನು ಮತಾಂಧತೆಯ ರೀತಿ ದುರ್ಬಳಕೆ ಮಾಡಬಾರದು. ಯಾವುದೇ ರೀತಿಯ ವೈಯುಕ್ತಿಕ ಲಾಭ ಅಥವ ಸ್ವ-ಪ್ರತಿಷ್ಠೆ ಮಾಡಿಕೊಳ್ಳದೆ ಇರೋಣ.

## ಎಲ್ಲರೂ ಒಂದಾಗೋಣ

ಎಲ್ಲಾ ಧರ್ಮದವರು ಒಂದಾಗೋಣ ಹಾಗು ಧಾರ್ಮಿಕ ಯುದ್ಧನೀತಿ ಕೈಬಿಡೋಣ. ಧರ್ಮದ ಹೆಸರಿನಲ್ಲಿ ಹಾಗು ಯುದ್ಧದ ಹೆಸರಿನಲ್ಲಿ ಆಗುವ ಮಾನವ ಸಂಹಾರ ಹಾಗು ಕ್ರೂರತೆ ನಿಲ್ಲಿಸೋಣ. ಮಾನವ ತನ್ನ ನಂಬಿಕೆಗೆ ತಕ್ಕಂತೆ ಧರ್ಮವನ್ನು ಹುಡುಕುವ ಸ್ವಾತಂತ್ರ ನೀಡಿ ಒಂದಾಗಿಸೋಣ. ಧಾರ್ಮಿಕ ಏಕಸ್ವಾಮ್ಯವನ್ನು ತ್ಯಜಿಸಲು ಒಂದಾಗೋಣ. ಪ್ರಶ್ನಾತ್ಮಕ ವಿಧಾನಗಳಿಂದ ಮಾರುಕಟ್ಟೆಗಳಲ್ಲಿ ಮತಾಂತರ ಮಾಡುವುದನ್ನು ತಡೆಯಲು ಒಂದಾಗೋಣ. ಎಲ್ಲಾ ಧರ್ಮದವರ ನಂಬಿಕೆ ಮತ್ತು ಆಚರಣೆಗಳನ್ನು ಗೌರವಿಸಲು ಒಂದಾಗೋಣ. ಈ ಅನಾರೋಗ್ಯಕರ ಧಾರ್ಮಿಕ ಸ್ಪರ್ಧಾತ್ಮಕ ಸವಾಲಿನ ಮನೋಭಾವವನ್ನು ಅಳಿಸಲು ಒಂದಾಗೋಣ. ನಮ್ಮ ಆಧುನಿಕ ಸಮಾಜದಲ್ಲಿ ಸಾಮಾನ್ಯವಾಗಿರುವ ಎಲ್ಲಾ ನೀಚ ದುಶ್ಶೀಲ, ಪಾಪಯುತ ಆಚರಣೆಗಳೆಲ್ಲವನ್ನು ನಿಶ್ಚೇತಗೊಳಿಸಲು ಒಂದಾಗೋಣ. ಎಲ್ಲರಲ್ಲು ಅತಿರೇಕ ತೊರೆಯಲು ಮಧ್ಯಮ ಮಾರ್ಗವನ್ನು ಪರಿಚಯಿಸಲು ಒಂದಾಗೋಣ.

ಪ್ರತಿ ಧರ್ಮ ಸಂಸ್ಥಾಪಕರು, ಮೂಲ ಉದ್ದೇಶವಿದ್ದುದೇ ಮಾನವತೆ. ಮಾನವರಲ್ಲಿ ಸೌಹಾರ್ದತೆ, ಮೈತ್ರಿ ಮತ್ತು ಪರಸ್ಪರ ತಿಳುವಳಿಕೆ ಮೂಡಿಸಿ ಜಗತ್ತನ್ನು ಸುಖವಾಗಿಡುವುದರಲ್ಲಿ ಆಗಿತ್ತು.



ಅಂತಹ ಧಾರ್ಮಿಕ ನಾಯಕರ ಹಾದಿಯನ್ನು ಹಿಂಬಾಲಿಸಿ ಪರರ ನಂಬಿಕೆಯವರನ್ನು ಗೌರವಿಸೋಣ. ದುರಾದೃಷ್ಟಕರವಾಗಿ ಪ್ರತಿ ಧರ್ಮದ ಕೆಲವರು ತಮ್ಮ ಸ್ವಾರ್ಥದಿಂದ ಹಾಗು ಅಸಹನೆಯಿಂದ ಮತ್ತು ಸಂಕುಚಿತದ ಮನೋಭಾವದಿಂದ ನಿಜ ಧರ್ಮದ ಸಾರವನ್ನೇ ಅರಿಯಲಾರದೆ ಅದರ ವಿರುದ್ಧವಾಗಿ ನಡೆದು ಘರ್ಷಣೆ, ಮಿಥ್ಯಾದೃಷ್ಟಿ, ಪಕ್ಷಪಾತ ಮತ್ತು ಅಸಹನೆಯನ್ನು ಸೃಷ್ಟಿಸಿದರು.

ನಾವು ನಿಜ ಹೃದಯದಿಂದ ನಂಬುವುದೇನೆಂದರೆ ಈ ಸತ್ಯಗಳನ್ನು ಅರ್ಥೈಸಿಕೊಂಡು ಒಂದುದಿನ ಎಲ್ಲಾ ಧರ್ಮದ ಸೋದರರು ಒಂದಾಗಿ ಮಾನವತೆಗೆ ದುಡಿಯುತ್ತಾರೆ.

ಅಂತಿಮ ವಿಶ್ಲೇಷಣೆಯಲ್ಲಿ ಹೇಳುವುದೇನೆಂದರೆ ಯಾರಲ್ಲಿ ತನ್ನ ಧಮ್ಮದ ಮೂಲಕ ಆಂತರ್ಯ ಶಕ್ತಿ ಹೊಂದಿದವರೊ ಅವರು ಶ್ರದ್ಧೆಯುಕ್ಕಿ ಅವರು ಪರರ ಧರ್ಮಕ್ಕೂ ಗೌರವಿಸುತ್ತಾರೆ.